ವೈ. ವೆಂಕಟೇಶ್ವರ ಭಟ್ಟ, ಯೇತಡ್ಕ

ಅತಿಕಾಯವಿಜಯ

ಮತ್ತು

ಶ್ರೀರಾಮನವಮಿ

(ಸರ್ವಜಿತು ವಧೆ)

ಯಕ್ಷಗಾನ

1943 75 2018

ಅಮೃತ ಮಹೋತ್ಸವ

ಗ್ರಂಥ ಮಾಲಿಕೆ-11

ಯಕ್ಷಗಾನ

ಅತಿಕಾಯವಿಜಯ

ಮತ್ತು

ಶ್ರೀರಾಮನವಮಿ

(ಸರ್ವಜಿತು ವಧೆ)

ವಿರಚಿತರು

ವೈ. ವೆಂಕಟೇಶ್ವರ ಭಟ್ಟ, ಯೇತಡ್ಕ.

ಹವ್ಯಕ ಅಧ್ಯಯನ ಕೇಂದ್ರ,
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು
ಮಲ್ಲೇಶ್ವರಂ, ಬೆಂಗಳೂರು

YAKSHAGANA ATHIKAYA VIJAYA &
SRI RAMA NAVAMI (Sarvajithu Vadhe)
By: Late Venkateshwara Bhat, Yethadka.
Published by : Sri Akhila Havyaka Mahasabha (R) Bangalore.
Havyaka Adhyayana Kendra, 101/A, 11th Cross, 8th Main,
Malleshwaram, Bangalore - 560 003. Ph : 080-23348193.
Email : shrihavyaka@gmail.com

ಮುದ್ರಣ : 2018

ಪ್ರಕಾಶನ : ಹವ್ಯಕ ಅಧ್ಯಯನ ಕೇಂದ್ರ
ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ), ಬೆಂಗಳೂರು

ಆಕಾರ : 1/8 ಡೆಮಿ

ಪುಟಗಳು : 68

ಬೆಲೆ : ರೂ. 60–00

ಅಕ್ಷರ ಜೋಡಣೆ : ಸೌಮ್ಯಾ ಜಗನ್ನಾಥ, ಬೆಂಗಳೂರು

ಪುಟ ವಿನ್ಯಾಸ : ಶುಭಲಕ್ಷ್ಮೀ, ಬೆಂಗಳೂರು

ಮುಖಪುಟ ವಿನ್ಯಾಸ : ಉದಯ ಕೃಷ್ಣ ಜಿ., ಬೆಂಗಳೂರು

ಮುದ್ರಣ : ಡ್ರ್ಯಾಪರ್ ಕ್ರಿಯೇಷನ್ಸ್, ಬೆಂಗಳೂರು

ಪ್ರಾಯೋಜಕರು – ಲೇಖಕರ ಮಕ್ಕಳು:

ಗೋವಿಂದ ಭಟ್, ಏತಡ್ಕ,
"ಶ್ರೀರಕ್ಷಾ", ಗುರುನಗರ,
ಕೊಂಚಾಡಿ,
ಮಂಗಳೂರು–575008.
ದೂ : 9449851729

ಶ್ರೀಮತಿ ಶೈಲಜಾ ಏತಡ್ಕ,
ಕನ್ನಡ ಪ್ರಾಧ್ಯಾಪಕರು,
ವಿಜಯಾ ಕಾಲೇಜು,
ಮೂಲ್ಕಿ, ದ.ಕ.
ದೂ : 9481916150

ಪ್ರಕಾಶಕರ ನುಡಿ

ಅಖಿಲ ಹವ್ಯಕ ಮಹಾಸಭೆಯು ಪ್ರಾರಂಭವಾಗಿ ಎಪ್ಪತ್ತೈದು ವರ್ಷಗಳು ಪೂರೈಸುವ ಈ ವರ್ಷವು (2018) "ಅಮೃತ ಮಹೋತ್ಸವ" ವರ್ಷವಾಗಿದೆ. ಈ ವರ್ಷಾಚರಣೆಯ ಸವಿನೆನಪಿಗಾಗಿ "ಅಮೃತ ಮಹೋತ್ಸವ ಮತ್ತು ಎರಡನೇ ವಿಶ್ವ ಹವ್ಯಕ ಸಮ್ಮೇಳನ" ನಡೆಯುವ ಇದೇ ಡಿಸೆಂಬರ್ 28, 29 ಮತ್ತು 30ರ ಶುಭಾವಸರದಲ್ಲಿ ಬೇರೆ ಬೇರೆ ವಿಷಯಗಳ 75 ಕೃತಿಗಳನ್ನು ಮುದ್ರಿಸಬೇಕೆಂದು ಅಖಿಲ ಹವ್ಯಕ ಮಹಾ ಸಭೆಯಲ್ಲಿ ನಿರ್ಣಯಿಸಲಾಯಿತು. ಶ್ರೀ ಅ.ಹ.ಮ. ಸಭೆಯ ಅಧ್ಯಕ್ಷರ ಅಭಿಲಾಷೆ ಮತ್ತು ಯೋಜನೆಯಂತೆ, ಹವ್ಯಕ ಅಧ್ಯಯನ ಕೇಂದ್ರವು ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ, ಬೆಂಗಳೂರು ಸೇರಿದಂತೆ ನಾಡಿನ ಹವ್ಯಕ ಬರಹಗಾರರನ್ನು ಸಂಪರ್ಕಿಸಿ ಕೃತಿಗಳನ್ನು ಬರೆದುಕೊಡಲು ಕೇಳಿಕೊಂಡಿತು. ನಮ್ಮ ಕೋರಿಕೆಗೆ ಅದ್ಭುತವಾಗಿ ಸ್ಪಂದಿಸಿದ ಹವ್ಯಕ ಲೇಖಕರು ನಮ್ಮ ವಿನಂತಿಯನ್ನು ಮನ್ನಿಸಿ, ನಮ್ಮ ನಿರೀಕ್ಷೆಗೂ ಮೀರಿ, ತಮ್ಮ ಕೃತಿಗಳನ್ನು ಅ.ಹ.ಮ. ಸಭೆಯ ಮೇಲಿನ ಪ್ರೀತಿ ಮತ್ತು ಅಭಿಮಾನದಿಂದ ಕಳಿಸಿಕೊಟ್ಟರು. ಅವರಲ್ಲಿ ನಾಡಿನ ಪ್ರಸಿದ್ಧ ಲೇಖಕರೂ ಇದ್ದಾರೆ; ಎಲೆ ಮರೆಯ ಕಾಯಿಯಂತಿರುವವರೂ ಇದ್ದಾರೆ. ಈ ಅಮೃತ ಮಹೋತ್ಸವ ಗ್ರಂಥಮಾಲಿಕೆಯಿಂದಾಗಿ ಕೆಲವು ಹವ್ಯಕ ಸುಪ್ತ ಪ್ರತಿಭೆಗಳೂ ಬೆಳಕಿಗೆ ಬರುವುದು ನಿಃಸ್ಸಂಶಯವಾಗಿದೆ. ಕೆಲವು ಕೃತಿಕಾರರು ಇಂದು ನಮ್ಮೊಂದಿಗಿಲ್ಲವಾದರೂ, ಹಲವು ದಶಕಗಳ ಹಿಂದೆ ಅವರು ಬರೆದಿರಿಸಿದ ಕೃತಿಗಳನ್ನು ಅವರ ಮಕ್ಕಳು ಹಾಗೂ ಕುಟುಂಬದವರು ಅ.ಹ.ಮ. ಸಭೆಯ ಮೂಲಕ ಪ್ರಕಟಣೆಗಾಗಿ ಇತ್ತು ಮಹದುಪಕರಿಸಿದ್ದಾರೆ. ಶ್ರೀ ಅ.ಹ.ಮ. ಸಭೆ ಮತ್ತು ಹವ್ಯಕ ಅಧ್ಯಯನ ಕೇಂದ್ರ ಹಾಗೂ ಅಮೃತ ಮಹೋತ್ಸವ ಮತ್ತು ಎರಡನೇ ವಿಶ್ವ ಹವ್ಯಕ ಸಮ್ಮೇಳನಾಚರಣೆಯ ವಿಶೇಷ ಸಮಿತಿ ಹಾಗೂ ಬಳಗವು ಎಲ್ಲ ಕೃತಿಕಾರರಿಗೆ, ಕೃತಿಗಳ ಪ್ರಾಯೋಜಕರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಈ ಯೋಜನೆಯ ಮೂಲಕ ಅನೇಕ ಹವ್ಯಕ ಬಂಧುಗಳು ಮತ್ತು ಕೃತಿಕಾರರು ಅ.ಹ.ಮ. ಸಭೆಯ ಸಂಪರ್ಕಕ್ಕೆ ಬಂದು, ಸಭೆಯ ಆಜೀವ ಸದಸ್ಯರಾಗಿರುವುದು ಅಭಿನಂದನೀಯವಾಗಿದೆ.

ಪ್ರಸ್ತುತ ಈ ಕೃತಿಯನ್ನು ಮುದ್ರಿಸಲು ಅನುಮತಿಸಿ ಪ್ರಾಯೋಜಕತ್ವವನ್ನು ನೀಡಿ ಸಹಕರಿಸಿದ ಲೇಖಕರ ಮಕ್ಕಳಾದ ಶ್ರೀ ಗೋವಿಂದ ಭಟ್ಟ, ಏತಡ್ಕ ಮತ್ತು ಶ್ರೀಮತಿ ಶೈಲಜಾ ಏತಡ್ಕ ಅವರಿಗೆ, ವಂದನೆಗಳು. ಇವರಿಂದ ಇನ್ನೂ ಹೆಚ್ಚಿನ ಕೃತಿಗಳು ರಚನೆಯಾಗಿ, ಸಾಹಿತ್ಯ ಸೇವೆಯ ಮೂಲಕ ಕೀರ್ತಿಗೆ ಪಾತ್ರರಾಗಲಿ ಎಂದು ಹಾರೈಸುತ್ತೇವೆ.

ಈ ಕೃತಿಯ ಗಣಕ ಪ್ರಕಾಶನ (ಡಿ.ಟಿ.ಪಿ) ಕಾರ್ಯವನ್ನು ಸಕಾಲದಲ್ಲಿ ಮಾಡಿಕೊಟ್ಟ ಕು॥ ಸೌಮ್ಯಾ ಜಗನ್ನಾಥ್, ಹನುಮಂತನಗರೆ, ಪುಸ್ತಕದ ಹೊರ ಹೊದಿಕೆಯನ್ನು ಸುಂದರವಾಗಿ ರಚಿಸಿದ ಶ್ರೀ ಉದಯ ಕೃಷ್ಣ ಜಿ., ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಡಾಪರ್ ಕ್ರಿಯೇಶನ್ಸ್ ಅವರಿಗೆ ಕೃತಜ್ಞತೆಗಳು.

ಮುಖಪುಟದಲ್ಲಿರುವ ಸಾಂಪ್ರದಾಯಿಕ ಅತಿಕಾಯ ವೇಷದಲ್ಲಿರುವ ಸುಪ್ರಸಿದ್ಧ ಯಕ್ಷಗಾನ ಕಲಾವಿದ ಶ್ರೀ ಹರಿನಾರಾಯಣ ಭಟ್ ಎಡನೀರು, ಛಾಯಾಚಿತ್ರವನ್ನು ತೆಗೆದು ಒದಗಿಸಿದ ಶ್ರೀ ಶ್ರೀಕೃಷ್ಣ ಭಟ್ ಸುಣ್ಣಂಗುಳಿ ಹಾಗೂ ಸಹಕರಿಸಿದ ಶ್ರೀ ಉಲ್ಲಾಸ್ ಸಿ. ಕೆ. ಇವರಿಗೆ ನಾವು ಋಣಿಗಳು.

ಪುಸ್ತಕಗಳನ್ನು ಕೊಂಡು ಓದಿ ಸಹಕರಿಸುವ ಬಂಧುಗಳೆಲ್ಲರಿಗೂ ಅನಂತಾನಂತ ವಂದನೆಗಳು.

ಸಂಚಾಲಕರು,
ಹವ್ಯಕ ಅಧ್ಯಯನ ಕೇಂದ್ರ,
ಶ್ರೀ ಅಖಿಲ ಹವ್ಯಕ ಮಹಾಸಭಾ, ಮಲ್ಲೇಶ್ವರಂ, ಬೆಂಗಳೂರು–3

॥ ಶ್ರೀ ॥

ಕವಿ-ಕೃತಿ ಪರಿಚಯ

ಕರಾವಳಿ ಕರ್ನಾಟಕ, ಕಾಸರಗೋಡು ಜಿಲ್ಲೆಗಳ ಜನಪ್ರಿಯ ಜಾನಪದ ಕಲೆಯಾದ ಯಕ್ಷಗಾನವನ್ನು ಎಲೆಮರೆಯ ಕಾಯಿಯಾಗಿದ್ದುಕೊಂಡೇ ಅಭ್ಯಾಸ ಮಾಡಿ, ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಹಿಡಿದು ನಾನಾ ಆಯಾಮಗಳಲ್ಲಿ ಸೇವೆ ಸಲ್ಲಿಸಿದ ಅಸಂಖ್ಯಾತ ಕಲಾವಿದರು ನಮ್ಮಲ್ಲಿದ್ದರು, ಹಾಗೂ ಈಗಲೂ ಇದ್ದಾರೆ. ಯಕ್ಷಗಾನದ ಕಲೆಯನ್ನು ಶ್ರೀಮಂತಗೊಳಿಸುವಲ್ಲಿ ಇಂತಹ ಹವ್ಯಾಸಿ ಕಲಾವಿದರ ಕೊಡುಗೆಯೂ ಗಮನಾರ್ಹವಾಗಿದೆ. ಅಂಥವರಲ್ಲಿ ನಮ್ಮ ಪೂಜ್ಯ ತಂದೆಯವರಾದ ಏತಡ್ಕ ವೆಂಕಟೇಶ್ವರ ಭಟ್ಟರೂ (ನವೆಂಬರ್ 1918-20-6-1993) ಒಬ್ಬರಾಗಿದ್ದಾರೆ. ಅವರಿಂದ ವಿರಚಿತವಾದ, ಈವರೆಗೆ ಅಪ್ರಕಟಿತವಾಗಿದ್ದ ಎರಡು ಯಕ್ಷಗಾನ ಪ್ರಸಂಗಗಳಾದ "ಅತಿಕಾಯ ವಿಜಯ" ಮತ್ತು "ಶ್ರೀ ರಾಮ ನವಮಿ" ಇವುಗಳನ್ನು ಸಂಯುಕ್ತವಾಗಿ, ಸದ್ರಿಯವರ ಜನ್ಮಶತಾಬ್ದಿಯ ಸಂದರ್ಭದಲ್ಲಿ ಈ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಸಂತೋಷದ ವಿಷಯವಾಗಿದೆ.

ಕೃತಿ ಕರ್ತರಾದ ದಿ॥ ವೈ. ವೆಂಕಟೇಶ್ವರ ಭಟ್ಟರು, ಕಾಸರಗೋಡು ತಾಲೂಕಿನ ಕುಂಬ್ಡಾಜೆ ಗ್ರಾಮದ ಒಂದು ಪುಟ್ಟ ಹಳ್ಳಿಯಾದ ಏತಡ್ಕದಲ್ಲಿ 1918ನೇ ಇಸವಿ ನವೆಂಬರ್‌ನಲ್ಲಿ ಕೃಷಿಕರಾದ ದಿ॥ ವೈ.ಕೃಷ್ಣ ಭಟ್ಟ ಮತ್ತು ದಿ॥ ಗೌರಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಮೂಲತಃ ಕುಂಬ್ಳೆ ಸಮೀಪದ ಕೋಣಮ್ಮೆಯವರೆಂದು ಹೇಳಲಾದ ಇವರು, ಅಲ್ಲಿಂದ ವುಳೆಕ್ಕುಂಜ ಎಂಬಲ್ಲಿ ಅನೇಕ ವರ್ಷಗಳಿದ್ದು, ಬಳಿಕ ಯೇತಡ್ಕಕ್ಕೆ ಲೇಖಕರ ಮುತ್ತಜ್ಜನ ಕಾಲದಲ್ಲಿ ಬಂದು ನೆಲೆಸಿದರೆಂದು ಹೇಳಲಾಗುತ್ತಿದೆ. ಮುಂದೆ ಏತಡ್ಕದಂತಹ ಹಳ್ಳಿಯಲ್ಲಿ ಆಗಷ್ಟೇ ಸ್ಥಾಪಿತವಾಗಿದ್ದ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಯಿತು.

ಅವರ ತಾಯಿ ಅರ್ಥಾತ್ ನಮ್ಮ ಅಜ್ಜಿ ದಿ॥ ಗೌರಮ್ಮನವರ ತವರು ಮನೆ ಹೆಸರಾಂತ ತೆಕ್ಕೆಕೆರೆ ಮನೆಯಾಗಿದೆ. ತೆಕ್ಕೆಕೆರೆಯ ಅವರ ಸೋದರಮಾವಂದಿರೊಂದಿಗೆ ಅವರಿಗೆ ಎಳವೆಯಿಂದಲೇ ನಿರಂತರ ಒಡನಾಟವಿತ್ತು. (ಈಗ ಬೆಂಗಳೂರಿನಲ್ಲಿ ನೆಲೆಸಿರುವ ನಾಡಿನ ಖ್ಯಾತ ಗಮಕ ಕಲಾವಿದ ಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟರ ಪೂರ್ವಜರು) ಈ ಹಂತದಲ್ಲಿ ಅವರಿಗೆ ಯಕ್ಷಗಾನದ ಗೀಳು ಅಂಟಿರಬೇಕು.

ಮೂಲತಃ ಕೃಷಿಕರಾಗಿದ್ದುಕೊಂಡೇ ಊರಿನಲ್ಲಿ ಜರಗುತ್ತಿದ್ದ ತಾಳಮದ್ದಳೆ ಕೂಟಗಳಲ್ಲಿ ಹವ್ಯಾಸಿಯಾಗಿ ಭಾಗವಹಿಸುತ್ತಿದ್ದರು. 1960-1980ರ ಕಾಲಘಟ್ಟದಲ್ಲಿ ಅವರ ವಾಸ್ತವ್ಯ ಸುಳ್ಯ ತಾಲೂಕು ಅಮರ ಪಡ್ನೂರು ಗ್ರಾಮದ ಕೊಡಂಚಿಅಡ್ಕದಲ್ಲಿರುವಾಗ, 1960-70ರ ದಶಕದಲ್ಲಿ ಆ ಪ್ರದೇಶದ ಹೆಸರಾಂತ ಯಕ್ಷಪ್ರತಿಭೆಗಳಾದ ದಿ॥ ಕೊಳಂಬೆ ಪುಟ್ಟಣ್ಣ ಗೌಡ, ದಿ॥ ಅಜ್ಜನಗದ್ದೆ ಗಣಪಯ್ಯ ಭಾಗವತರು ಮತ್ತು ದಿ॥ ದೇರಾಜೆ ಸೀತಾರಾಮಯ್ಯ - ಈ ಮೂವರ ಸ್ನೇಹ, ಪರಿಚಯ ಮತ್ತು ಒಡನಾಟ ಇವರಿಗೆ ಲಭಿಸಿತ್ತು. ಈ ಮೂವರು ಯಕ್ಷ ಪ್ರತಿಭೆಗಳ ಪ್ರೇರಣೆ, ಮಾರ್ಗದರ್ಶನದಲ್ಲಿಯೇ ಈ ಎರಡೂ

ಯಕ್ಷಗಾನ ಪ್ರಸಂಗಗಳು ರಚನೆಯಾಗಿರುವುದು ಎಂದು ಸ್ಪಷ್ಟವಾಗುತ್ತದೆ. ಇವರು ಕೊನೆಯ ದಿನಗಳಲ್ಲಿ ಯೇತಡ್ಕ ಗದ್ದೆಮನೆಯಲ್ಲಿಯೇ ನೆಲಸಿದ್ದರು.

ಮೇಲುನೋಟಕ್ಕೆ ಈ ಎರಡು ಕಥಾ ಪ್ರಸಂಗಗಳು ರಾಮಾಯಣದಲ್ಲಿ ಬರುವ ಪ್ರಸಂಗಗಳಂತೆ ಕಂಡರೂ, ಇವು ರಾಮಾಯಣಾಂತರ್ಗತ ಕಥೆಗಳಲ್ಲ. ಒಂದು ರಾಮಾಯಣ ಪೂರ್ವ ಕಥೆ – "ಅತಿಕಾಯ ವಿಜಯ", ಇನ್ನೊಂದು ರಾಮಾಯಣೋತ್ತರ ಕೃತಿ–"ಶ್ರೀ ರಾಮನವಮಿ". ಮೂಲಗ್ರಂಥದ ಹೆಸರನ್ನು ಕೃತಿಕಾರರು ಉಲ್ಲೇಖಿಸದಿರುವುದರಿಂದ ಈ ಎರಡು ಕೃತಿಗಳೂ ಅವರದೇ ಮನೋಭೂಮಿಕೆಯ ಸೃಷ್ಟಿಯೆಂದು ಭಾವಿಸಲಾಗಿದೆ. ಹಾಗಾಗಿ ಈ ಕೃತಿಗಳು "ನೂತನ ಪ್ರಸಂಗ" ಗಳೆಂದರೆ ತಪ್ಪಾಗಲಾರದು.

ಕೃತಿಕಾರರ ಜನ್ಮಶತಾಬ್ದಿಯ ಈ ಸಂದರ್ಭದಲ್ಲಿ ಅವರ ಅಪ್ರಕಟಿತ ಕೃತಿಗಳು ಪ್ರಕಟವಾಗುವುದರಿಂದ ಅವರ ಮಕ್ಕಳಾದ ನಾವು ಅತ್ಯಂತ ಹರ್ಷಪಡುತ್ತೇವೆ ಹಾಗೂ ಅಖಿಲ ಹವ್ಯಕ ಮಹಾಸಭೆಯ 75ನೇ ವರ್ಧಂತಿ – ಅಮೃತ ಮಹೋತ್ಸವಾಚರಣೆಯ ಈ ಶುಭ ಸಂದರ್ಭದಲ್ಲಿ ಈ ಕೃತಿಗಳನ್ನು ಪ್ರಕಟಿಸಲು ಸ್ವೀಕರಿಸಿದ ಅಖಿಲ ಹವ್ಯಕ ಮಹಾಸಭೆಯ ಮತ್ತು ಹವ್ಯಕ ಅಧ್ಯಯನ ಕೇಂದ್ರದ ಬಂಧುಗಳೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳು. ಇದಕ್ಕಾಗಿ ಶ್ರಮಿಸಿದ ಹವ್ಯಕ ಅಧ್ಯಯನ ಕೇಂದ್ರದ ಸಂಚಾಲಕರಾದ "ಕರ್ನಾಟಕ ಕಲಾಶ್ರೀ" ಗಮಕಿ ಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟರಿಗೂ ಕೃತಜ್ಞತೆಗಳು.

ಈ ಕೃತಿಗಳ ಲೋಕಾರ್ಪಣೆಯನ್ನು ಯಕ್ಷಲೋಕವು ಸಂಭ್ರಮದಿಂದ ಸ್ವಾಗತಿಸುವುದಾಗಿ ಆಶಿಸುತ್ತೇವೆ.

ಶ್ರೀಮತಿ ಶೈಲಜಾ ಏತಡ್ಕ,
ಕನ್ನಡ ಪ್ರಾಧ್ಯಾಪಕರು,
ವಿಜಯಾ ಕಾಲೇಜು,
ಮೂಲ್ಕಿ, ದ.ಕ.
ದೂ : 9481916150

ಗೋವಿಂದ ಭಟ್, ಏತಡ್ಕ,
"ಶ್ರೀರಕ್ಷಾ", ಗುರುನಗರ,
ಕೊಂಚಾಡಿ,
ಮಂಗಳೂರು–575008.
ದೂ : 9449851729

ಅಧ್ಯಕ್ಷರ ನುಡಿ

ಯಕ್ಷಗಾನ ಕಲೆಯ ಅತ್ಯದ್ಭುತವೆನಿಸುವ ಪ್ರಸಂಗ ಪ್ರದರ್ಶನ ಸಾಧ್ಯವಾಗಬೇಕಾದರೆ ಆ ಪ್ರಸಂಗದ ಸಾಹಿತ್ಯವೂ ಅಷ್ಟೇ ಚೆನ್ನಾಗಿರಬೇಕು.ತೆರೆಮರೆಯಲ್ಲಿದ್ದುಕೊಂಡು ಪ್ರಸಂಗಕರ್ತರಾಗುವುದಕ್ಕೆ ಬುದ್ಧಿವಂತಿಕೆ, ಪೌರಾಣಿಕ ಜ್ಞಾನ, ಕಥಾ ಪ್ರಸ್ತುತಿ ಕೌಶಲ್ಯ, ಸಾಹಿತ್ಯ ಕೃಷಿ, ರಾಗ ತಾಳ ಸಂಗೀತ ಜ್ಞಾನ–ಎಲ್ಲವೂ ಮೇಳೈಸಿದ್ದರೆ ಮಾತ್ರವೇ ಸಾಧ್ಯವಾಗುತ್ತದೆ.ಅದರಲ್ಲೂ ತಮ್ಮ ಮನೋಭೂಮಿಕೆಯಿಂದಲೇ ಸೃಷ್ಟಿಸುವ ನೂತನ ಪ್ರಸಂಗಗಳೆಂದರೆ ಇನ್ನೂ ಹೆಚ್ಚಿನ ಸವಾಲು ಇರುತ್ತದೆ.ರಾಮಾಯಣ ಪೂರ್ವ ಕಥೆಯಾದ ಅತಿಕಾಯ ವಿಜಯ ಹಾಗೂ ರಾಮಾಯಣೋತ್ತರ ಕಥೆಯಾದ ಶ್ರೀರಾಮ ನವಮಿ ಎಂಬೆರಡು ಪ್ರಸಂಗಗಳನ್ನು ಬರೆದಿಟ್ಟ ದಿವಂಗತ ವೈ.ವೆಂಕಟೇಶ್ವರ ಭಟ್ಟ, ಯೇತಡ್ಕ ಇವರ ಕೃತಿ ಅವರ ಜನ್ಮಶತಾಬ್ಧಿ ವರ್ಷದಲ್ಲೇ ಪ್ರಕಟವಾಗುತ್ತಿರುವುದು ಅತೀವ ಸಂತಸ ನೀಡುತ್ತಿದೆ.

ಭಾರತೀಯ ಸಾರಸ್ವತ ಸಂವಹನ ಕ್ಷೇತ್ರದ ಭಾಷಾ ಪ್ರಪಂಚದಲ್ಲಿ ಹವ್ಯಕ ಭಾಷೆಯು ಹಲವು ವಿಶೇಷತೆಗಳಿಂದ ಪ್ರಬುದ್ಧ ಹಾಗೂ ಸಮೃದ್ಧವಾಗಿದೆ. ಹವಿಗನ್ನಡ ಎನಿಸಿಕೊಂಡ ಈ ಭಾಷೆಯಲ್ಲಿ ನೆಲದ ಸೊಗಡಿದೆ, ಸಂಪ್ರದಾಯದ ಸತ್ವವಿದೆ, ಸಮುದಾಯದ ಸ್ವಂತಿಕೆಯಿದೆ, ದೇಶೀಯತೆಯ ಆಶೋತ್ತರವಿದೆ, ಪರಂಪರೆಯ ಪರಾಮರ್ಶೆಯಿದೆ, ಕರುಣಾಮಯಿ ಹೃದಯಗಳ ಮುಗ್ಧತೆಯಿದೆ, ಬುದ್ಧಿವಂತ ಮನಸ್ಸುಗಳ ಅಭಿಲಾಷೆಯಿದೆ, ಪ್ರಜ್ಞಾವಂತ ಚಿಂತನೆಯ ಪ್ರಖರತೆಯಿದೆ. ಹವ್ಯಕ ಸಮುದಾಯವೊಂದಕ್ಕೇ ಸೀಮಿತವಾಗಿರುವ ಹವಿಗನ್ನಡವು ಸೀಮೆಯಿಂದ ಸೀಮೆಗೆ ಮತ್ತೆ ಮಾರ್ಪಾಡು ಹೊಂದಿ ಪ್ರದೇಶವಾರು ಆರೇಳು ರೂಪದಲ್ಲಿ ರೂಢಿಯಲ್ಲಿರುವುದು ದೇಶದ ಭಾಷಾ ವೈವಿಧ್ಯತೆಯ ನಡುವೆ ಐತಿಹಾಸಿಕ ಹಾಗೂ ಸಾರ್ವಕಾಲಿಕ ದಾಖಲೆಯಾಗಿ ಉಳಿಯುತ್ತದೆ. ಇಂತಹ ಹವಿಗನ್ನಡ ಸಾಹಿತ್ಯ ಲೋಕದಲ್ಲಿ ಮೂಡಿಬಂದ ಅನುಪಮ ಕುಸುಮವಾಗಿರುವ ಈ ಕೃತಿಯನ್ನು ತಮಗರ್ಪಿಸಲು ಹವ್ಯಕ ಮಹಾಸಭೆಗೆ ಹೆಮ್ಮೆಯಿದೆ.

ಸ್ವಾತಂತ್ರ್ಯಪೂರ್ವದಲ್ಲೇ ಜನಿಸಿದ ಹವ್ಯಕರೆಲ್ಲರ ಪ್ರಾತಿನಿಧಿಕ ಸರ್ವೋಚ್ಚ ವಿಶ್ವವ್ಯಾಪಿ ಸಂಸ್ಥೆಯಾದ ಶ್ರೀ ಅಖಿಲ ಹವ್ಯಕ ಮಹಾಸಭಾವು 75 ವರ್ಷಗಳನ್ನು ಪೂರೈಸಿದ ಶುಭಸಂದರ್ಭದಲ್ಲಿ ಅಮೃತ ಮಹೋತ್ಸವ ಹಾಗೂ ದ್ವಿತೀಯ ವಿಶ್ವಹವ್ಯಕ ಸಮ್ಮೇಳನಗಳನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಚರಿಸುತ್ತಿದೆ. ಈ ಐತಿಹಾಸಿಕ ಕ್ಷಣದಲ್ಲಿ ಅಮೃತ ಮಹೋತ್ಸವ ಗ್ರಂಥ ಮಾಲಿಕೆಯಡಿ 75ಸುಪ್ರಸಿದ್ಧ ಲೇಖಕರು ಬರೆದ ಹವ್ಯಕರ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಸ್ವಾಧ್ಯಾಯ, ಸ್ವಾನುಭವ, ಸಾಧನೆಗಳಿಗೆ ಸಂಬಂಧಿಸಿದ 75ಪುಸ್ತಕಗಳು ಏಕಕಾಲಕ್ಕೆ ಲೋಕಾರ್ಪಣೆಯಾಗುತ್ತಿರುವುದು ಸಾಹಿತ್ಯ ಲೋಕದಲ್ಲಿನ ಅಪರೂಪದ ವಿದ್ಯಮಾನವಾಗಿ ಇತಿಹಾಸ ನಿರ್ಮಾಣವಾಗುತ್ತಿರುವುದು ಅತೀವ ಸಂತಸದ ಸಂಗತಿಯಾಗಿದೆ.

ಕೃತಿಕಾರರ ಹೃದಯಸ್ಪರ್ಶಿ ಸ್ಪಂದನೆಯು ನಮ್ಮಲ್ಲಿ ಧನ್ಯತಾ ಭಾವವನ್ನು ಸೃಜಿಸಿದೆ.ಕೃತಿಕಾರರು, ಸಂಪಾದಕ–ಸಂಚಾಲಕ–ಪ್ರಕಾಶಕ ಹಾಗೂ ಓದುಗರು ಧನ್ಯರು, ಅಭಿನಂದನಾರ್ಹರು.

ಡಾ. ಗಿರಿಧರ ಕಜೆ, ಅಧ್ಯಕ್ಷರು,

ಶ್ರೀ ಅಖಿಲ ಹವ್ಯಕ ಮಹಾಸಭಾ(ರಿ)

॥ ಶ್ರೀ ಮಹಾಗಣಪತಯೇ ನಮಃ ॥ ಶ್ರೀ ಕುಲದೇವತಾ ಪ್ರಸನ್ನಾ ॥

॥ ನಿರ್ವಿಘ್ನಮಸ್ತು ॥

ಯಕ್ಷಗಾನ – ೧

ಅತಿಕಾಯ ವಿಜಯ

ಛಂದಸ್ಸು

ಶ್ರೀಮದಮೃತಾಬ್ಧಿಯೋಳ್ ಸಾಸಿರ ಹೆಡೆಯ ಹೊತ್ತ । ಆದಿಶೇಷನ ಮೇಲೆ ನಿಂದಲ್ಲಿ ನಿಲ್ಲದಾ । ಸಿರಿವೆಣ್ಣ ಕೈವಿಡಿದು ಪವಡಿಸುತ ಪೊರೆವೆ ನಿ । ನ್ನಿಚ್ಛೆಯಿಂ ಜಗದಖಿಳ ಜೀವರಂ ಕರುಣದಿಂ ಆನಂದಮಯನಾಗಿ ॥ ಓ ಮಹಾಮಹಿಮ ಆ ಮೂದೇವಿ ಕುಲದೇವಿ । ನುಡಿದ ಕವಿತಾಮೃತವ ಕ್ಷರವಲ್ಲದಕ್ಷರದಿ । ಬರೆವಂತೆ ತವಪಾದದೊಲ್ಮೆಯಂ ಬಲ್ಮೆಯಂ । ಎನಗಿತ್ತು ಕಾವುದೈ ಹೇ ಘನಕೃಪಾಜಲಧಿ ಇದೊ ಮಣಿವೆ ನಿನ್ನಡಿಗೆ ॥

ರಾಗ – ಸುರುಟಿ – ಏಕತಾಳ

ಕರುಣಿಸು ಮಹಾಮ್ಮಾಯೆ । ಮೂಜಗ । ದರಸಿ ಕೃಪಾ ಹೃದಯೆ ॥ ತರುಣ ತರಣಿ ಹಿಮ। ಕರ ಶತ ಭಾಸುರೆ । ಹರಿ ವಾಹಿನಿ ಪುರ । ಹರನರ್ಧಾಂಗಿನಿ ॥ ೧ ॥

ಶ್ರೀಲೋಲನನನುಜೆ । ಧೃತಿ ಮತಿ । ಶೀಲವ ನೀಡಗಜೆ ॥ ಬಾಲೆ ವಿಮಲ ಗುಣ । ಮಾಲೆ ನಿರಾಮಯೆ । ಶೂಲಿನಿ ಮಹಿಮಾ । ಲೀಲಾ ನಾಟಕಿ ॥ ೨ ॥

ವಿಧಿ ಸುರ ವರ ನಮಿತೆ । ಪಾವನ । ಹೃದಯೆ ಕಲಾಭರಿತೆ ॥ ಮದಮುಖ ಮಹಿಷನ । ನುದರ ಬಗೆದು ಬಳಿ । ಕದಿತಿ ಸುತರ ಪೊರೆ । ದದುಭುತ ಸಾಹಸಿ ॥ ೩ ॥

ರಕ್ತಬೀಜ ಖಳನ । ಜೀವವ । ಯುಕ್ತಿಯೊಳಿರಿದ ಘನ ॥ ಶಕ್ತಿ ಸ್ವರೂಪೆ ಸ । ದ್ಭಕ್ತರನನುದಿನ। ಯುಕ್ತದಿ ಪೊರೆವ ಶ್ರೀ । ರಕ್ತೇಶ್ವರಿ ನಮೋ ॥ ೪ ॥

ಚಂಡಮುಂಡರ ಶಿರವ । ಹಾರಿಸಿ । ಚೆಂಡಾಡುತ ಜಗವ ॥ ಬಂಡೆಸೆಗಿದ ಕಡು । ಭಂಡ ಶುಂಭಾದ್ಯರ । ರುಂಡವ ತರಿದ ಪ್ರ । ಚಂಡೆ ದುರ್ಗಾಂಬಿಕೆ ॥ ೫ ॥

ಕಂದ

ಅಂಬುಜಭವ ಹರಿಹರರಂ । ಸಂಭ್ರಮದಿಂ ನುತಿಸುತಾನು ನಿಶ್ಚಲ ಮನದಿಂ ॥ ದಂಬುಜಭವನರಸಿಯ ನೆನೆ । ದಂಬುಧಿ ತನುಜೆಯ ಪದಕಭಿ ವಂದಿಪೆ ಮುದದಿಂ ॥ ೧ ॥

ವಾರ್ಧಿಕ

ನಗವೈರಿ ಮುಖ್ಯ ದಿಕ್ಪಾಲರ್ಗೆ ನಮಿಸುತಾ । ರ್‍ಗನನುರೆ ಕೊಂಡಾಡಿ ಶ್ರೀರಾಮ ಸಿರಿ ಚರಣ । ಯುಗಳ ನಿಜ ದೂತನಂ ವಾತ ಸಂಜಾತನಂ ಕಲಿಹನುಮನಂ ಧ್ಯಾನಿಸಿ ॥ ಜಗಕೆ ಮಂಗಲವೀವ ಜಗದ ಜೀವರ ಕಾವ । ಅಗಣಿತ ಮಹಿಮ ಘನ ಕೃಪಾಕರಂ ಶ್ರೀಕರಂ। ಮಿಗೆ ಸೊಗದ ಗಜಮೊಗದ ಮಧುಪುರದ ಗಣಪನಂ ಭಜಿಸುವೆಂ ಮನ್ಮನದೊಳು ॥ ೧ ॥

ಕಂದ

ನೆಚ್ಚಿನ ಮಮ ಬಂಧುಗಳಂ । ಸಚ್ಚಾರಿತ್ರ್ಯದ ಬಾಂಧವ ಕೆಳೆಯರ ಸಹಿತಂ ॥

ಸ್ವಚ್ಛ ಮನದಿ ಭಾವಿಸಿ ಮುದ । ಹೆಚ್ಚಿ ಸಕಲ ಜೀವಾಳಿಗಳೊಲ್ಮೆಯ ಪಡೆವೆಂ ॥ ೧ ॥

ಭಾಮಿನಿ

ಸರಸ ಸುಕಲಾಭರಿತ ಪದ ಬಂ । ಧುರದ ಕೋವಿದ ಹಿರಿಯ ಕವಿಗಳ । ಚರಣಕಾನತನಾಗಿ ವಾಗ್ದೇವಿಯಳ ಬಲಗೊಂಡು ॥ ಕಿರಿಯರೊಲವನು ಪಡೆದು ಸಿರಿಗುರು । ಹಿರಿಯರಮಲ ಪದಾರವಿಂದದ । ಪರಮ ಆಶೀರ್ವಾದ ರಕ್ಷೆಯ ನಮಿಸಿ ಕೈಗೊಳುತ ॥ ೧ ॥

ನಾಗಶಯನನ ಪುಣ್ಯಕಥನವ । ರಾಗ ಭಾವ ರಸಾದಿ ಗುಣದಿನಿ। ದಾಗಿ ಸಜ್ಜನರೋದಲೆಂದ್ಯ ಕ್ಷಗಾನದೊಳ್ ಬರೆದು ॥ ಲೋಗ ಜನತೆಗೆ ಕೈಮುಗಿದು ಮೇ । ಣಾ ಗಿರಿಜೆಯಳ ಸಿರಿಪದಕೆ ತಲೆ । ಬಾಗಿ ಪೇಳುವೆನೀ ಮಧುರ ರಸಭರಿತ ಸತ್ಕಥೆಯ ॥ ೨ ॥

ವಾರ್ಧಿಕ

ಸಮುಹೃದಯರಾಲಿಪುದು ಸಗ್ಗದ ಸುಧರ್ಮೆಯೊಳ್ । ತ್ರಿದಶ ಮನು ಮುನಿ ಖಚರ ಯಕ್ಷ ದಿಗಧಿಪರೆಸೆಯ । ಉದಧಿ ರವದಿಂದ ತ್ರೈಭುವನೇಂದ್ರ ಗುಣಸಾಂದ್ರ ಮಾಹೇಂದ್ರ ಜಯವೆನ್ನುತ ॥ ಅಧಿಕ ವುತ್ಸಾಹದಿಂ ಪಾತಕರು ಪೊಗುಳುತಿರೆ । ವಿಧವಿಧದ ವಿಭವದಿಂದಿಭರಥನು ಸಭೆಗೈದಿ । ಮಧುಹರನ ಪದವನೆನೆದಮಲ ಧರ್ಮಾಸನಕೆ ನಮಿಸುತದನೇರಿ ಕುಳಿತ ॥ ೧ ॥

ರಾಗ – ನವರೋಜು – ಏಕತಾಳ

ಆಡಿದರೂ ಯುವತಿಯರು । ಒಡ । ನಾಡುತಲೆಲ್ಲವರೆದುರು ॥ ಗಾಢದಿ ಭಾವವ । ಮೂಡಿಸಿ ಕೈಗಳ । ನಾಡಿಸಿ ಮೋಡಿಯ । ಮಾಡುತ ಝುಣಝುಣ ॥ ೧ ॥

ಕೊರಳನು ಕೊಂಕಿಸಿ ಬಳಸಿ । ಮುಂ । ಗುರುಳನು ತಾ ನೇವರಿಸಿ ॥ ಮಿರುಗುವ ರತುನಾ। ಭರಣದೊಳುಡುಗೆಯ । ಸರಿಸುತ ನಗೆ ಸುಮ । ವರಳಿಸಿ ತಕ ಥೈ ॥ ೨ ॥

ಕಣ್ಣುಗಳಾ ಅರಳಿಸುತಾ । ಮೈ । ಬಣ್ಣವನೇ ತೋರಿಸುತ ॥ ತಿಣ್ಣ ಪಯೋಧರ । ವನ್ನಲುಗಿಸಿ ಸಿರಿ । ಯಣ್ಣನ ಮೊಗದವರ್ । ಧಿನ್ನಕ ಧಿಮಿತಕ ॥ ೩ ॥

ಕಟಿ ಕಟವಾ ಕುಲುಕಿಸುತ । ಕೆಂ । ದುಟಿಗೆ ಕೈಬೆರಳಿಡುತ ॥ ಮಿಟಮಿಟ ನೋಡಲು । ದಿಟ ಪುರಷರ ಮನ । ತಟಪಟವಾಗಲು । ಕಿಟತಕ ತರಿಕಿಟ ॥ ೪ ॥

ಭಾಮಿನಿ

ತುಂಬಿದೋಲಗದೊಳಗೆ ನಾಟ್ಯವ । ರಂಭೆಯೂರ್ವಶಿ ಮುಖ್ಯರೆಸಗಲು । ತುಂಬಿದು ತ್ಸಾಹದೊಳು ಥೇ ಯೆನೆ ಕೋಟಿ ಕಂಠಗಳು ॥ ಜಂಭದಾನವ ಭಂಜಕನು ಬಾಯ್ । ತುಂಬ ಕೊಂಡಾಡುತಲಮೃತಕರ । ಬಿಂಬವದನೆಯರನು ಕಳುಹಿ ತಾನೆಂದ ಸಭೆಯೊಳಗೆ ॥ ೧ ॥

ರಾಗ – ಭೈರವಿ – ಝುಂಪೆ ತಾಳ

ಕೇಳಿರೈ ಸುರಧಾಮ । ದೇಳಿಗೆಗೆ ಬೇಕಾಗಿ । ಬಾಳುವೆಯ ಸವೆದ ದಿಗು ॥ ಪಾಲ ಸುರಮುಖರು ॥ ೧ ॥

ಮೇದಿನೀ ಭಾರಕರ । ಭೇದಿಸುತ ನಮ್ಮವರ । ಮೂದೇವರೊಲಿದು ಪೊರೆ । ದಾದೊ

ಡೊಂದಿಹುದು ॥ ೨ ॥

ಕೌಣಪ ಕುಲಾಧೀಶ । ಶೋಣಿತಾ ಪುರದರಸ । ಯೇಣಾಂಕ ಧರನ ಸಮ । ತ್ರಾಣ ಶಶಿಕೇತ ॥ ೩ ॥

ಹಿಂದೊಂದು ಬಾರಿ ಖಳ । ವೃಂದದೊಡಗೂಡಿ ಮಾ । ಹೇಂದ್ರ ಪುರಕೈದಿ ಖತಿ । ಯಿಂದ ನಮ್ಮವರ ॥ ೪ ॥

ಕೊಳುಗುಳದಿ ಗೆಲಲವನ । ಕುಲಿಶದಿಂ ಶಿರಕೆ ಬಡಿ । ಯಲು ತಡೆಯದೋಡಿದನ । ಸುಳಿವನರಿತಿಲ್ಲ ॥ ೫ ॥

ಹಗೆತನವ ಸಲಿಸುವೊಡೆ । ಬಗೆಯರಿತು ಕುಹಕದಿಂ । ವಿಗಡನೈತೆರೆ ಗೆಲುವ । ಬಗೆಯೆಂತು ಪೇಳಿ ॥ ೬ ॥

ರಾಗ – ಭೈರವಿ – ಅಷ್ಟತಾಳ

ತಾತನೆ ಬಿಡು ಭಯವ । ಶೋಣಿತ ಪುರ । ನಾಥನ ಭುಜಬಲವ ॥ ಘಾತಿಸದಿರೆ ತವ । ಜಾತ ಜಯಂತನೆ । ನೀ ತಾಳು ಮನದಿ ಧೈರ್ಯ ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಮೀಸೆ ತಿರುಹುತಲಗ್ನಿ ನುಡಿದ ಮ । ಹಾ ಸಭೆಯೊಳೀಯಲ್ಪ ವಿಷಯವ । ಘೋಷಿಸಲು ಯೇನುಂಟು ದೋಷಿಯ ನಾಶಗೈವೆ ॥ ೧ ॥

ರಾಗ – ಕಾಂಬೋಧಿ – ಝಂಪೆ ತಾಳ

ರಕ್ಷಣಾ ಮಂತ್ರಿ ಯಮ । ನಾಕ್ಷಣದೊಳೆದ್ದಧಮ । ರಾಕ್ಷಸನು ಇಲ್ಲಿಗೈತರಲು ॥ ದಾಕ್ಷಿಣ್ಯ ವಿಡದೆಯೇ । ಶಿಕ್ಷಿಸುವೆನವನೊಂದು । ಲಕ್ಷ್ಯವೇ ಅಲ್ಲ ತನಗೆಂದ ॥ ೧ ॥

ರಾಗ –ಭೈರವಿ – ಏಕತಾಳ

ಕರತಾಡನದಿಂ ಸಭೆಯು । ಜೈ । ಸ್ವರ ಮೊಳಗಲು ನೈಋತಿಯು ॥ ದುರುಳನುದರ ಬಗೆದೊಗೆದು । ನೆ । ತ್ತರ ಚೆಲ್ಲುವೆ ನಾ ನಲಿದು ॥ ೧ ॥

ರಾಗ – ನಾದನಾಮ ಕ್ರಿಯೆ – ಅಷ್ಟತಾಳ

ದಡಬಡಿಸುತ ಕಡಲೊಡೆಯನು । ಎದ್ದುಎಡಗೈಯ ಹಾರಿಸುತೆಂದನು ॥ ಧಡಿಗನ ಗೊಡವೆಯದೇಕಿಲ್ಲಿ । ಸಾಕು । ಬಿಡಿರಿಯವನ ಕಾಂಬೆ ರಣದಲ್ಲಿ ॥ ೧ ॥

ರಾಗ – ಕೇದಾರಗೌಳ –ಝಂಪೆ ತಾಳ

ವಾತ ಕೂತಲ್ಲಿಂದಲಿ । ಪೇಳ್ದ ಶಶಿ । ಕೇತನೀ ತಳಕೆ ಬರಲಿ ॥

ಭೀತಿಯೇಕಾತನೊಡಲ । ಕತ್ತರಿಸಿ । ನಾ ತಣಿಪೆ ಭೂತದೊಡಲ ॥ ೧ ॥

ರಾಗ – ಪಂಚಾಗತಿ –ಮಟ್ಟೆ ತಾಳ

ನೆತ್ತಿಯೊರಸುತರ್ಥ ಸಚಿವ । ನಿತ್ತು ಆಯವ್ಯಯದ ಲೆಕ್ಕ । ಪತ್ರ ಸಭೆಯೊಳೋದತೊಡಗೆ। ಧೂರ್ತದನುಜನ ॥ ವರ್ತಮಾನ ಹಬ್ಬಲಿದು ಇ । ತ್ಯರ್ಥವಾಗದೆಂದು ತಿಳಿದು । ಮತ್ತೆ ನುಡಿದ ಖಳನ ಕಥೆ ಮ । ಹತ್ವವೇ ಬಿಡು ॥ ೧ ॥

ರಾಗ – ಮಾರವಿ – ಏಕತಾಳ

ಕೂದಲ ಸರಿಸಿ ಧ । ನಾದಿಪನೋದಿದ । ನೀ ಧನವನು ಪೊರೆವ ॥ ಹಾದಿಯ ಕುರಿತು ನಿ । ವೇದಿಸಲಿರೆ ತಡೆ । ಯಾದನೆ ಆ ದುರುಳ ॥ ೧ ॥

ರೋಷಾವೇಷದೊ । ಳೀಶನು ಭಾಸುರ । ದಾಸನವನು ಸರಿಸಿ ॥ ದೋಷಿಯನೀಸಲ । ಘಾಸಿಪೆ ವಾಸವ ಕ್ಲೇಶವೆ ನಾನಿರಲು ॥ ೨ ॥

ವಾರ್ಧಿಕ

ಅಣುಗರಿರ ಕೇಳಿರೈ ದೆಸೆಯಾಣ್ಮರೆಂದ ನುಡಿ । ಮಣಿಗೆ ಸಂತಸ ಹೆಚ್ಚಿ ಮೆಚ್ಚಿ ಶಹಭಾಶೆಂದು। ಗುಣದೊಳವರಂ ಮಘವ ಮಿಗೆ ಪೊಗಳಲಗಧರಂ ಮೇದಿನಿಯ ಭಾರವಿಳುಹಿ ॥ ಮಣಿಮಯದ ವೈಕುಂಠ ಮಂಟಪದೊಳೊಂದು ದಿನ । ತಣುಗದಿರನನುಜೆ ಸಿರಿಸಹಿತ ರತುನ। ಮಣೆಯೋಳ್ಪಗಡೆಯನಾಡುತಿರಲು ಹರಿ ಯೋಚಿಸಿದ ಮುಂದೆ ರಾಮಾಯಣದೊಳು॥ ೧ ॥

ಭಾಮಿನಿ

ಲೋಕ ಭೀಕರ ಕೈಕಸಾತ್ಮಜ । ನಾ ಕುಮಾರನ ಪೋಕತನವನು । ಲೋಕನೋಡಲು ತೂಕಮಾಡುವೆನಾ ಕಲಹ ಮುಖದಿ ॥ ಶ್ರೀಕರನು ತಾ ಬೇಕೆನುತಲೇ । ಮೂಕನಾಗುತಲಾ ಕಮಲಭವ । ನಾ ಕುಮಾರನನೇಕ ಲೋಕ ಶುಭಾಕರನ ನೆನೆಯೆ ॥ ೧ ॥

ರಾಗ – ಮಧ್ಯಮಾವತಿ – ತ್ರಿವುಡೆ ತಾಳ

ಪದುಮನಾಭನನಮಲ ನಾಮದ । ಸುಧೆಯ ಸವಿಯುತ ಜ್ಞಾನನಿಧಿ ನಾ । ರದನು ಬರಲೀಕ್ಷಿಸುತ ಮಣಿಯನು । ಬದಿಗಿರಿಸುತತಿ ಬೇಗದಿ । ಸಿರಿಯು ಸಹಿತ ॥ ೧ ॥

ನಾಗಶಯನನಿದಿರ್ಗೊಳುತ ಸು । ಸ್ವಾಗತವ ಬಯಸುತ್ತ ಸ್ವಾರ್ಥ । ತ್ಯಾಗಿ ಯೋಗಿಯನಾಗ ಕರೆತಂ। ದಾಗಮೋಕ್ತದಿ ಪೀಠದಿ । ಕುಳ್ಳಿರಿಸುತ ॥ ೨ ॥

ಕಡಲಣುಗೆ ನೀರೆರೆಯೆ ಋತ್ವಿಜ । ನಡಿಯ ತೊಳೆದಾ ಮಡಿ ಜಲವ ಸಿರಿ । ಮುಡಿಗೆ ಸಹ ತಾದಳಿದು ಭಕ್ತಿಯೊ । ಳಡಿಗಡಿಗೆ ಸತ್ಕರಿಸಲು । ಮುನಿಪ ನುಡಿದ ॥ ೩ ॥

ಸಾಕು ಸಾಕುಪಚಾರವಿದನೇನ । ಗೇಕೆ ಮಾಡುವೆ ಬರಿದೆ ಲೋಕಾ । ನೇಕ ಪೊರೆವ ಮಹಾ ಮಹಿಮ ನಿ । ನ್ನೀ ಕಪಟ ನಾಟಕವನು । ತಿಳಿವರುಂಟೆ ॥ ೪ ॥

ನೀ ನೆನೆದುದೇಕೆನ್ನ ಕಾರ್ಯವ । ದೇನು ಆರೊಡನೆಂಬ ವಿವರವ । ಸಾನುರಾಗದೊ ಳರುಹಿದೊಡೆ ನಾ । ನ್ಯೂನಮಿಲ್ಲದೆ ಮಾಳ್ಪೆನು । ನಿನ್ನ ದಯದಿ ॥ ೫ ॥

ವಾರ್ಧಿಕ

ಕೈಟಭಾರಿಯು ಕಮಲಪೀಠಸುತಗೊರೆದಾ ನಿ । ಶಾಟಕುಲಕಧಿಕ ಸಾಮ್ರಾಟ ರಾವಣನ ಕೊಂ । ಡಾಟ ಮಗನತಿಕಾಯನಾಟೋಪ ಗುಣವ ಸೆಣಸಾಟದಿಂದರಿವೊಡೆನಗೆ ॥ ಧಾಟಿಯುತ ನೆವವನೊಂದಾಟದಿಂ ಗೈವುದೆನೆ । ನೋಟಕರ್ ಮೆಚ್ಚೆ ನಿನ್ನಾಟ ಸಾಗಲಿ ಎನುತ । ಮೀಟಿ ವೀಣೆಯ ಕಪಟ ನಾಟಕನ ಜಪಿಸಿ ಮುನಿ ದಾಟಿ ಹರಿ ಪುರವ ನಡೆಯೆ ॥ ೧ ॥

ಭಾಮಿನಿ

ಶುದ್ಧ ಚಿತ್ತರು ಕೇಳಿ ಜಗದಿ ಪ್ರ। ಸಿದ್ಧ ಶೋಣಿತಪುರದೊಳೊಂದಿನ। ಯುದ್ಧ ಕಲೆಯ ವಿಶಾರದರ ಸಚಿವಾಪ್ತ ಬಾಂಧವರ॥ ರುದ್ರ ಬಲ ಜಗ ಜಟ್ಟಿ ರಕ್ಕಸ। ರುದ್ದಕೂ ಓಲಗದೊಳಿರೆ ಮಣಿ। ಗದ್ದುಗೆಯ ಶಶಿಕೇತನೇರ್ದನುತಾಪದೊಳಗೆಂದ॥ ೧॥

ರಾಗ – ಕಾಂಬೋಧಿ – ಝಂಪೆ ತಾಳ

ಅಚಲ ಮತಿಗಳು ಕೇಳಿ। ವಚನವನು ಧರೆಯ ನೃಪ। ನಿಚಯವನೆ ಧುರದಿ ಸೋಲಿಸುತ॥ ಪ್ರಚುರ ಬಲ ನೆರಹಿ ಸುರ। ಖಚರಾದಿಗಳ ಗೆಲಲು। ಅಚಲಾರಿ ತಡೆಯೆ ಕಾದಿದೆನು॥೧॥

ಗೆಲವು ಕಾಣದಿರೆ ಬಲ। ವಳುಕಿ ಮೋಸದಿ ಶಕ್ರ। ಬಲಿದು ಕುಲಿಶದೊಳೆನ್ನ ಶಿರಕೆ॥ ಛಲದಿ ಬಡಿಯಲು ಬೀಳೆ। ಬಲ ವೈರಿ ಕೀಳ್ಮಾತು। ಗಳನಾಡುತಪಮಾನಗೈದ॥ ೨॥

ಎನ್ನನವಮಾನಿಸಿದ। ಕುನ್ನಿ ಸುರಪನ ಗರ್ವ। ವನ್ನಿಳಿಸದಿರೆ ಜಗದಿ ಬಾಳ್ವೆ॥ ಇನ್ನೇಕೆ ತನಗೆನುತ। ಖಿನ್ನತೆಯೊಳುಸುರೆ ಮುನಿ। ರನ್ನ ನಾರದನು ನಡೆತಂದ॥ ೩॥

ರಾಗ – ಕೇದರಾಗೌಳ – ಅಷ್ಟತಾಳ

ಕಂದರ್ಪ ಮಥನ ಪು। ರಂದರಾದ್ಯನಿಮಿಷ। ವೃಂದ ವಂದಿತ ಚರಣ॥ ನಂದಿ ವಾಹನ ಪೂರ್ಣ। ಚಂದಿರ ಧರ ಕೃಪಾ। ಸಿಂಧು ದೀನೋದ್ಧರಣ॥ ೧॥

ಕಂಜನಾಭನ ಸಖ। ನಂಜುಂಡನಭವ ಧ। ನಂಜಯಾಂಬಕ ಶ್ರೀಕರ॥ ಮಂಜುಳ ಕ್ಷೇತ್ರದಿ। ರಂಜಿಪ ಜನಮನ। ರಂಜಕ ಮಂಜುನಾಥ॥ ೨॥

ಶೇಷಭೂಷಣ ಭವ। ಪಾಶ ಹರಣನಗ। ಜೇಶ ಸ್ಮಶಾನ ವಾಸ॥ ಆ ಸೂರ್ಯ ಶಶಿ ಶತ। ಭಾಸುರ ದೇವ ಸಂ। ತೋಷದಿ ಪೊರೆ ಜಗವ॥ ೩॥

ಭಾಮಿನಿ

ಈ ತೆರದಿ ಶಂಕರನ ಭಜಿಸುತ। ಲಾ ತಪೋಧನನೈತರಲು ಶಶಿ। ಕೇತನಾತನ ಗೌರವದಿ ಕರೆತಂದು ಕುಳ್ಳಿರಿಸಿ॥ ಪ್ರೀತಿ ನೀತಿಯೊಳುಪಚರಿಸೆ ಪುರು। ಹೂತ ಹಗೆಯನ ಮೊಗವ ನೋಡುತ। ಲೇತರದ ಕಾತುರವು ನಿನಗೆನಲೆಂದ ಖಳನಿಂತು॥ ೧॥

ರಾಗ – ಕಾಂಭೋಜಿ – ಅಷ್ಟ ತಾಳ

ಚಿತ್ತವಿಸೆನ್ನಯ ಮಾತ। ಮುನಿ। ಪೋತ್ತಮ ಸದ್ಗುಣಭರಿತ॥ ಧಾತ್ರಿ ಮೂರರ ಗೆಲು। ವರ್ತಿಯಿಂದಲಿ ಬಲ। ಮೊತ್ತವನು ನೆರ। ಹುತ್ತ ವಹಿಲದಿ। ಪೃಥ್ವಿಪರ ನು। ಗ್ಗೊತ್ತಿ ಗೆಲಿದೆನು॥ ೧॥

ಬಳಿಕಮರಾವತಿ ಪುರಕೆ। ಚಾತು। ರ್ಬಲ ಸಹ ಪೋಗೆ ಕಾಳಗಕೆ॥ ಕಲಿತನದಲಿ ಸುರ। ಬಲ ಬಂದು ತಡೆಯಲು। ಛಲದೊಳವರನು। ಗೆಲಲು ಕಾಣುತ। ಬಲ ರಿಪುವು ಮುನಿ। ದಳವಿಗೈತರೆ॥ ೨॥

ವಿಧ ವಿಧದಿಂದ ಕಾದಿದೆವು। ಜಯ। ವಧುವಗಾಣದೆ ಸುರ ವಿಭುವು॥ ಹದಗೆಡುತಲಿ ವಜ್ರಾ। ಯುಧದಿಂದೆನ್ನಯ ತಲೆ। ಬದಿಗೆ ಬಡಿಯ। ಲ್ಕದರ ಘಾತಕೆ। ಅದುರಿ ಬೀಳಲು।

ಮುದದಿ ಸುರಪನು ॥ ೩ ॥

ಕೇಳು ಮಾತುಗಳಿಂದಲೆನ್ನ । ಬೈದು । ಖೂಳ ನೀ ಹೋಗೆಂದು ಮುನ್ನ ॥ ಚಾಳಿಸಿದುದನೆಲ್ಲ। ಕೇಳಿ ತಾಳುವದೆಂತೊ । ಪೇಳಲೆನ್ನೆಯ । ಬಾಳಿನೇಳಿಗೆ । ಹಾಳುಗೈದ್ದಮ । ರಾಳಿಯೊಡೆಯನ ॥ ೪ ॥

ಕಂದ

ಆವ ವಿಧದಿ ಗೆಲುವುದನುಂ । ದೇವಮುನಿಯೆ ನೀನೆಲ್ಲವ ಸೂಚಿಸಿ ನಯದಿಂ ॥ ಕಾವುದೆನುತಲಂಘ್ರಿಗೆ ಸ । ದ್ಭಾವದಿ ಶಶಿಕೇತ ನಮಿಸೆ ಮುನಿ ನಗುತೆಂದಂ ॥ ೧ ॥

ರಾಗ – ಬೇಗಡೆ – ಅಷ್ಟತಾಳ

ಲಾಲಿಸೈ ದನುಜೇಂದ್ರ ಶಶಿಕೇತ । ಇದಕೇಕೆ ಚಿಂತೆಯ । ತಾಳುತಿಹೆ ಬಿಡು ಮೂಜಗದಿ ಖ್ಯಾತ ॥ ಶೂಲಧರ ಸಮ ಸತ್ವಯುತ ನಿ । ನ್ನಾಲಯದಿ ಸಿರಿ ನೆಲಸಿಹಳು ಸ್ಥಿರ । ಕಾಳಗದಿ ಭೈರವನ ಗೆಲುವ ಕ । ಟ್ಟಾಳುಗಳು ಇರಲಾಯ್ತೆ ಪರಿಭವ ॥ ೧ ॥

ಬಿಡು ಬಿಡಾ ಸುರ ವರನ ಗೆಲುವಂತ । ಬಲು ವೀರನೊಬ್ಬನು । ಪೊಡವಿಯೊಳು ಜನಿಸಿರುವ ಗುಣವಂತ ॥ ಹುಡುಗತನದೊಳಗಸುರ ಕುಲಗುರು । ವೆಡೆಯೊಳ್ ಕಲಿತನು ಹಲವು ವಿದ್ಯೆಯ । ಬಿಡದೆ ಮನಕದು ತೃಪ್ತಿಯಾಗದೆ । ಜಡಜಭವನನು ತಪದೊಳೊಲಿಸುವ ॥ ೨ ॥

ಮೂಲಮಂತ್ರವನರಿತು ಗುರುವಿಂದ । ಕಮಲಜನ ಮೆಚ್ಚಿಸೆ । ಮೂಲ ಶರ ಕವಚವನು ಮುದದಿಂದ ॥ ಮೇಲೆ ಮಣಿರಥ ಸಹಿತ ವರವನು । ನಾಳಿಕೋದ್ಭವನೀಯೆ ಸಂತಸ । ತಾಳದಿರೆ ಕೈಲಾಸಕೈದುತ । ಶೂಲಿಯೊಳು ಶರವಿದ್ಯೆ ಕಲಿಯುವ ॥ ೩ ॥

ಸತ್ಯ ವಚನ ವಿಶಾಲ ಮತಿಯುತನು । ನಿಗಮಾದಿ ಶಾಸ್ತ್ರದ । ತತ್ವವರಿತಿಹ ಪ್ರಾಜ್ಞ ಸುಂದರನು॥ ಚಿತ್ತ ಶುದ್ಧನು ಸುಗುಣ ಶ್ರೀ ಹರಿ । ನಿತ್ಯ ಭಜಕನುದಾರಿ ರಿಪು ಭಟ । ವೃತ್ತ ವಾರಣ ಶೌರ್ಯ ಸಿಂಹಮ । ರೋತ್ತಮನ ಬಗೆಗೊಂಬನೇ ದಿಟ ॥ ೪ ॥

ಇನ್ನು ಕೇಳ್ ತವ ಭಗಿನಿಯಾಗಿರುವ । ಆ ಧಾನ್ಯಮಾಲಿನಿ । ಯನ್ನು ರಾವಣ ರಮಿಸೆ ಪುಟ್ಟಿರುವ ॥ ಉನ್ನತದ ತನುವಿಹುದರಿಂ ಶಿಶು । ರನ್ನನಿಂಗತಿಕಾಯನೆಂದೇ । ಮನ್ನಿಸುತ ಪೆಸರಿಟ್ಟು ಸಾಕಿದ । ನಿನ್ನಳಿಯನನು ಬಿಡದೆ ದಶಶಿರ ॥ ೫ ॥

ಭಾಮಿನಿ

ಮುನಿಪನಿಂತೆನಲಮರ ರಿಪು ನಿಜ । ಮನದಿ ಯೋಚಿಸುತವನೊಳಾಡಿದ । ವಿನಯದೊಳಗೆನ್ನನುಜೆಯನು ಗಂಧರ್ವ ಚಿತ್ರರಥ ॥ ಸನುಮತದಿ ಕೊಂಡೊಯ್ಯಲವಳನು । ದನುಜ ರಾವಣ ನೋಡಿ ಮತ್ತಾ । ತನುಜನನು ಪಡೆದಂದವೆಲ್ಲವ ಸೂಚಿಸೆನಲೆಂದ ॥ ೧ ॥

ವಾರ್ಧಿಕ

ವಿಸ್ತರಿಪೆನದರ ಕೇಳ್ ಕನಕ ಲಂಕೇಶ ದಶ । ಮಸ್ತಕಂ ದಿಗ್ವಿಜಯಕೆಂದು ಸಂಭ್ರಮದಿಂ ಪ್ರ । ಶಸ್ತ ಪುಷ್ಪಕವೇರ್ದು ಶೈತ್ಯ ಗಿರಿ ತಪ್ಪಲೋಳ್ ಸುತ್ತಾಡಲಾ ಸಮಯದಿ ॥ ಹಸ್ತಿಗಮನೆಯರನೊಡನುತ್ಸಹದಿ ತವ ಭಗಿನಿ । ವಿಸ್ತರದ ವನದಿ ಸುಮ ಕೊಯ್ಯುತ್ತಲಿರಲಾ ಸ ।

ಮಸ್ತ ಗುಣಯುತೆ ಧಾನ್ಯಮಾಲಿನಿಯು ಕಂಡು ಮೋಹದಿ ರಮಿಸಲುದಿಸೆ ಶಿಶುವು ॥ ೧ ॥

ಕಂದ

ಪುಟ್ಟಿದ ಮಗುವಂ ಕಾಣುತ । ತಟ್ಟಿದುದೆನಗಪವಾದವು ದಿಟವೆನ್ನುತ ಬಾಯ್ ॥ ಬಿಟ್ಟಳಲುವ ತಾಯ್ ಮಗು ಸಹಿ । ತೊಟ್ಟಾಗುತ ಬಂದೋವಿದ ಲಂಕೆಯೊಳವರಂ ॥ ೧ ॥

ಭಾಮಿನಿ

ಪೋಗು ಲಂಕೆಗೆ ಬೇಗ ವಿನಯದಿ । ನಾಗವೇಣಿಯ ಕಂಡು ಪೊಗಳಿ ಸ । ರಾಗದಿಂ ಭಾಷೆಯನುಗೊಂಡಾ ಮೇಲೆ ವಿವರವನು ॥ ಆಗ ಪೇಳಲು ನಿನಗೆ ಬಹು ಲೇ । ಸಾಗುವದು ಕಾರ್ಯದೊಳು ದಿಟವೆನು । ತಾಗ ವೇಗದಿ ಯೋಗಿ ಸಾಗಿದನಾ ಗಗನ ಪಥಕೆ ॥ ೧ ॥

ರಾಗ – ಸಾಂಗತ್ಯ – ರೂಪಕ ತಾಳ

ಮತ್ತಾ ದಾನವ ತನ್ನ । ಪತ್ತನವನೆ ಬಿಟ್ಟು । ಹೊತ್ತ ಚಿಂತೆಯೊಳು ಬೆಂಡಾಗಿ ॥ ಋತ್ವಿಜ ಪೇಳ್ದುದು । ಸತ್ಯವೊ ಮಿಥ್ಯವೊ । ಚಿತ್ತಜಾರಿಯೆ ಬಲ್ಲನೆನುತ ॥ ೧ ॥

ಘನ ಬೇಗದಲಿ ಬಂದು । ಕನಕ ಲಂಕೆಯ ಸೇರಿ । ಅನುಜೆಯ ಮನೆಯರಿಯದೆಯೆ ॥ ಮನದಿ ಯೋಚಿಸುತೋರ್ವ। ನನು ಕೇಳ್ದೊಡಾತ ಪೇ । ಳ್ದನು ಬೆರಳೆತ್ತಿ ತೋರಿಸುತ ॥ ೨ ॥

ಮುಂದಕಿಲ್ಲಿಂದ ನೂ । ರೊಂದು ಮಾರ್ ದೂರದೊ । ಳಿಂದ್ರ ದೆಸೆಯೊಳಿರ್ಪ ಕನಕ ॥ ಮಂದಿರವದೆ ಪೋಗಿ । ರೆಂದು ಕೈ ನೀಡಲಾ । ನಂದದೊಳವನ ಸಂತವಿಸಿ ॥ ೩ ॥

ಕಳೆಗುಂದಿದಾ ಮೊಗ । ದೊಳು ನಡೆ ತರುವನ । ಜಲಜಾಕ್ಷಿ ನೋಡಿ ಯೋಚಿಸುತ ॥ ತಿಳಿದು ತನ್ನಣ್ಣನ । ನಿಳಯಕೆ ಕರೆತಂದು । ಬಳಿಕ ಸಂಭ್ರಮದಿ ಸತ್ಕರಿಸಿ ॥ ೪ ॥

ಅಣ್ಣ ನಿನ್ನನು ನೋಳ್ಪ । ಪುಣ್ಯವಿರ್ಪುದರಿಂದ । ಕಣ್ಣೊಳು ಕಂಡೆ ನಿನ್ನುವನು ॥ ಧನ್ಯಳಾದೆನು ತವ । ಚೆಣ್ಣರತ್ತಿಗೆ ಸಹ । ಪೂರ್ಣ ಪದುಳವೈಸೆ ಪುರದಿ ॥ ೫ ॥

ನಿತ್ಯ ಕ್ಷೇಮವವೆ ಪ್ರಜಾ । ಮೊತ್ತಕೆ ಮಿತ್ರರ್ಗೆ । ಮತ್ತೆ ನಿನ್ನಾಸ್ಯ ಚಂದಿರಗೆ ॥ ಮುತ್ತಿಕೊಂಡಿದೆ ರಾಹು । ಚಿತ್ತದಿ ವ್ಯಥೆಯೇಕೆ । ಇತ್ತ ಬಂದಿಹ ಕಾರ್ಯವೇನು ॥ ೬ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ತಂಗಿ ಕೇಳಾ ಮಧುರ ಭಾಷಿಣಿ । ಮಂಗಳಾಂಗಿ ಸುದತಿ ಶಿರೋಮಣಿ । ಸಿಂಗರದ ಗುಣ ರತುನದಾಭರ । ಣಾಂಗ ಶೋಭೆ ॥ ೧ ॥

ಕಡುಹುಗಾರರ ದೇವ ಲಂಕೆಯ ಒಡೆಯನಹ ರಾವಣನ ಮನಸೆರೆ । ವಿಡಿದ ನೀನೇ ಧನ್ಯೆ ಮಾನ್ಯೆಯು । ಪೊಡವಿಯೊಳಗೆ ॥ ೨ ॥

ತಾಯೆ ಕೇಳೆನಗೀಗ ಬಂದಿಹ । ಹೇಯವಾದಪಮಾನ ಕಳೆಯಲು । ಪಾಯಗಾಣದೆ ಬಂದೆನಿಲ್ಲಿಗೆ । ಕಾಯೊ ಎನ್ನ ॥ ೩ ॥

ಅಸುರ ಕುಲದೊಳಗುದಿಸಿ ರಸೆಯಲಿ । ಹೆಸರು ಪಸರಿಸಲೇನು ಫಲ ಮನ । ಕುಸಿದು ಪುರವನು ಬಿಟ್ಟು ಬಂದಿಹೆ । ಬಿಸಜ ನಯನೆ ॥ ೪ ॥

ಹೇಗೆ ಹೋಗಲಿ ಮತ್ಪುರಕೆ ನಾ । ಹೇಗೆದೋರಲಿ ಮೊಗವ ಜನರ್ಗೆ ಇ । ನ್ನೇಗೆ ಬಾಳಲಿ

ಮುಂದೆ ಮಾನದಿ । ಹೇ ಗುಣಾಢ್ಯೆ ॥ ೫ ॥

ಆಡಲೇನದನಿನ್ನು ನೀ ದಯ । ಮಾಡುತೆನ್ನವಮಾನ ನಿನಗದ । ನೋಡಿ ಕಾವುದೆನುತ್ತ ದುಃಖದಿ । ಬೇಡಲಾಗ ॥ ೬ ॥

ಕಂದ

ಹಲವಂಗದೊಳಳುತಲಿ ತ । ನ್ನೊಳು ಪೇಳ್ವಣ್ಣನ ಕಳಾ ವಿಹೀನತೆ ಮೊಗಮಂ ॥
ಜಲಜದಳಾಂಬಿಕೆ ಕಾಣುತ । ಬಳಿಕುಸುರಿದಳತಿ ನಯೋಕ್ತಿಯಿಂದಾತನೊಳಂ ॥ ೧ ॥

ರಾಗ – ಶಂಕರಾಭರಣ – ಏಕತಾಳ

ಅಣ್ಣ ನಿನಗಾರಿಂದ ಬಂದ । ಬನ್ನವೇನು ಚಿಂತೆ ಯೇಕೆ ॥
ಉನ್ನತ ವ್ಯಾಧಿಯೊ ನಿಜವ । ನೆನ್ನೊಳು ಪೇಳು ॥ ೧ ॥

ಸಾಧ್ವಿ ಕೇಳಿನ್ನಾದೊಡಂಥ । ವ್ಯಾಧಿ ದೇಹಕಿಲ್ಲ ಮನದ ॥
ವ್ಯಾಧಿಯೊಂದೆ ಇಹುದು ಮಾನ। ಕಾದ ಭಂಗದಿ ॥ ೨ ॥

ತುಂಗಬಲನೆ ನಿನ್ನ ಮಾನ । ಭಂಗಗೈದ ಸುಭಟನಾರು ॥
ಸಂಗತಿಯ ನೀನರುಹಲವನ । ಭಂಗಿಸುವೆ ದಿಟ ॥ ೩ ॥

ಕಂಬುಗೊರಳೆ ನಿನ್ನ ಮಾತ । ನಂಬಿ ನಡೆವೆನೆಂತೊ ನಾನು ॥
ಕುಂಭಿನಿಯೊಳು ಸತಿಯರಬಲೆ । ಎಂಬರಲ್ಲವೆ ॥ ೪ ॥

ಅರಿಯೆಯಾ ಸಾವಿತ್ರಿ ಮುಖ್ಯ । ಪರಮ ಸಾಧ್ವಿಯರ ಚರಿತ್ರ ॥
ಧರೆಯ ಜನರು ಪೊಗಳುತಿರಲು । ಜರೆವುದೇತಕೆ ॥ ೫ ॥

ಪಂಥ ನುಡಿವೆಯಲ್ಲ ನಿನ್ನೊ । ಳಂತ ಸತ್ವದಿರವ ಕಾಣೆ ॥
ಮುಂತೆ ಜಗದೊಳಾನು ಬಾಳ್ವ । ದೆಂತೊ ತಿಳಿಯೆನು ॥ ೬ ॥

ನಲಿದು ಒಲಿಯೆ ನಾರಿ ಮುನಿದೊ । ಡಿಳೆಯೊಳವಳೆ ಮಾರಿಯೆಂಬ ॥
ಒಳವನರಿಯದೊರೆದೆ ಇದಕಾ । ನಳುಕೆ ನಿಶ್ಚಯ ॥ ೭ ॥

ಭಾಮಿನಿ

ಅನುಜೆ ಕೇಳೆನಗಾದ ಭಂಗದಿ । ಮನದ ಧೃತಿ ಕಂಗೆಡಲು ಪೇಳಿದೆ । ಮನದಿ ನೀ ಬೇಸರಿಸ ಬೇಡೌ ತಾಯೆ ಕರುಣದಲಿ ॥ ನಿನಗೆ ಭಂಗವಗೈದ ಖೂಳನಿ । ಗನುವರದಿ ಪ್ರತಿ ಫಲವನುಣಿಸುವೆ । ನೆನುತ ನೀ ನಂಬುಗೆಯನಿತ್ತೊಡೆ ಪೇಳ್ವೆನೆಲ್ಲವನು ॥ ೧ ॥

ವಾರ್ಧಿಕ

ಅಣ್ಣ ನಿನಗಪಮಾನಮನ್ನೆಸಗಿದಧಮ ಛೇ । ಪೂರ್ಣ ಬಲನೇ ಇರಲಿಯವನಂ ರಣಾಗ್ರದೋಳ್ । ಚಿಣ್ಣನತಿಕಾಯನಿಂದಡಿಗಡಿಗೆ ಘಾತಿಸುತ ಕೆಡಹಿಸದೆ ಇರ್ದೊಡಾನು ॥ ಸ್ವರ್ಣ ಲಂಕೇಶ್ವರನ ಸತಿಯೆ ನಿನಗನುಜೆಯೆ ಸು । ಪರ್ಣಧ್ವಜನ ಚರಣ ಕಿಂಕರನ ಮಾತೆಯೇ । ನಿರ್ಣಯದ ವಚನವಿದಕಿನ್ನು ನಾಂ ತಪ್ಪಿದೊಡೆ ಕೇಳ್ಪ್ರತಿಜ್ಞೆಯನೆಂದಳು ॥ ೧ ॥

ಭಾಮಿನಿ

ಭೂವಲಯದೊಳು ಧೂರ್ತತನದಿಂ । ಗೋವಧೆಯನೆಸಗಿದಗೆ ಪರದೊಳ । ಗಾವಗತಿ

ಸಿದ್ಧಿಪುದದುವೆ ತನಗೆನುತ ನಂಬುಗೆಯ ॥ ಅ ವಿಬುಧರಿಪುಗಿತ್ತು ನಿನ್ನನು । ಈ ವಿಧದೊಳವಮಾನಗೈದಿಹ । ನಾವಭಟ ಪೆಸರೇನಿದೆಲ್ಲವನರುಹು ಎನಲೆಂದ ॥ ೧ ॥

ರಾಗ – ಶಂಕರಾಭರಣ – ಅಷ್ಟತಾಳ

ಕೇಳಮ್ಮ । ಎನಗಾದಪಮಾನವ । ಕೇಳಮ್ಮ ॥ ಪ ॥

ಪೂರ್ವದೊಳಾನೊಂದು ದಿನದಿ । ಜಗ । ದುರ್ವಿಪಾಲರ ಗೆಲ್ವ ಮನದಿ । ಬಲ । ಸರ್ವವನೊಡಗೊಂಡುತ್ಸಹದಿ । ಬಲು । ಗರ್ವದೊಳಿದಿರಾದ । ಸರ್ವಭೂಪರ ಗೆಲ್ದು । ತರ್ವಾಯ ಧುರಕೆಂದೆ । ಗೀರ್ವಾಣ ಪುರಕ್ಕೈದಿ ॥ ೧ ॥

ಮುಷ್ಟಿ ಯುದ್ಧದಿ ಶೌರ್ಯವೆರಸಿ । ಆ ತ್ರಿ । ವಿಷ್ಟಪರನು ಕಾದಿ ಜೈಸಿ । ಮೇಣ್ಬ । ಲಿಷ್ಠ ದಿಗ್ವರರ ಕಂಗೆಡಿಸಿ । ಮೆರೆ । ವಷ್ಟರೊಳ್ ಸುರಪಜ । ದೃಷ್ಟಿಸಿ ತಡೆದಂಬ । ವೃಷ್ಟಿಗರೆಯಲದ । ನಷ್ಟಗೊಳಿಸುತಾಗ ॥ ೨ ॥

ಛಲದಿ ಜಯಂತನ ಗೆಲಲು । ಕಂಡು । ಮುಳಿದಮರೇಂದ್ರನು ನಿಲಲು । ರಣ । ದೊಳು ಶೌರ್ಯ ಪಂಥ ಪಾಡುಗಳು । ಭುಜ । ಬಲದಿ ಸರ್ವಾಸ್ತ್ರ ಕು । ಶಲಿಗರು ಸೆಣಸಾಡೆ । ಜಲಜ ಸಂಭವ ಕಾಣು । ತಲಿ ತಲೆದೂಗಿದ ॥ ೩ ॥

ಈ ತೆರದಲಿ ಯುದ್ಧ ನಡೆಯೆ । ಪುರು । ಹೂತ ಮನದೊಳೊಂದ ನೆನೆಯೆ । ಖಳ । ಧಾತುಗೆಡುವನಲ್ಲ ತಿಳಿಯೆ । ಎನು । ತಾತ ನೆನ್ನಯ ಶಿರ । ಕೋತು ಕುಲಿಶದಿಂದ । ಘಾತಿಸೆ ಬೀಳಲು । ನೀತಿಯನುಳಿದೆನ್ನ ॥ ೪ ॥

ವಾರ್ಧಿಕ

ವಿಕಟಾಟ್ಟಹಾಸದಿಂ ಸುರರ ಹೆಂಡಿರ ಮುಂದೆ । ಪ್ರಕಟದಿಂ ಖೂಳ ನೀ ಹೋಗು ಹೋಗೆನುತಮರ । ನಿಕರದಿದಿರಿನೊಳೆನ್ನ ಕೈತಟ್ಟಿ ಜರೆದು ಅವಮಾನಿಸಿದನಾ ಶಕ್ರನು ॥ ಸಕಲವೂ ನಿನ್ನದೈಸಲೆ ದೇವಿ ಕಾವುದೆಂ । ದಕುಟಿಲೆಗೆ ಶೋಕದಿಂ ನುಡಿಯೆ ಕಂಡಾ ಧಾನ್ಯ ಮಾಲಿನಿಯು ನುಡಿದಳವಗೆ ॥ ೧ ॥

ಭಾಮಿನಿ

ನೀ ಹೆದರದಿರು ಲಂಕೆಯೊಳಗೆಂ । ದಾ ಹಿರಿಯನನು ಸಂತವಿಸಿ ಬಳಿ । ಕಾ ಹಿಮಕರಾ ನನೆಯು ನಿಜ ಮನದೊಳಗೆ ಯೋಚಿಸುತ ॥ ಆಹವದಿ ಸುರವರನ ಗೆಲುವೊಡೆ । ಶ್ರೀ ಹರಿಯು ಕೈಬಿಡನವನ ದಿಟ । ವೀ ಹದನವರಿಯದೆಯೆ ಭಾಷೆಯನಿತ್ತೆನಗ್ರಜಗೆ ॥ ೧ ॥

ಕಂದ

ಕೊಟ್ಟಾ ಭಾಷೆಗೆ ತಪ್ಪಿದೊ । ಡೆಷ್ಟಾದರು ನೀತಿಯಲ್ಲ ದುಷ್ಕೀರ್ತಿಗಳುಂ ॥
ತಟ್ಟದೆ ಬಿಡದಿದರೊಳ್ ನಾಂ । ಕೆಟ್ಟೆನೆನುತ ಮನದಿ ಶೋಕಿಸುತಲವಳಿರ್ದಳ್ ॥೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಪುತ್ರರಿರ ಲಾಲಿಪುದು ಮುಂಗಥೆ । ಯತ್ತ ರಜತಾಚಲದಿ ರಾವಣ ।
ಪುತ್ರನಹನತಿಕಾಯ ನಿರ್ಮಲ । ಚಿತ್ತದಿಂದ ॥ ೧ ॥

ತ್ರಿಜಗ ವಂದಿತ ಚರಣ ಭಜಕ । ವ್ರಜ ದುರಿತ ಸಂಹರಣ ಶಿವನೊಳು ।
ಯಜುರ್ವೇದಾದಿಗಳನೋದುತ । ವಿಜಯನಾಗೆ ॥ ೨ ॥

ಮೂಡಿಗೆಯ ಕಣೆದೆಗೆದು ಚಾಪಕೆ । ಜೋಡಿಸುತಲದ ಬಿಡುವ ಗುರಿಯ ನಿ ।
ಗೂಢವೆಲ್ಲವ ಮಾಡಿ ತೋರಿಸೆ । ನೋಡಿ ಕಲಿತ ॥ ೩ ॥

ಕಂತು ಮರ್ದನ ಮೂಲ ಶರಗಳ । ಮಂತ್ರ ತಂತ್ರವನವನ ಕರ್ಣದೊ ।
ಳಂತರಂಗ ದೊಳರುಹಿದೊಡೆ ಮತಿ । ವಂತ ತಿಳಿದು ॥ ೪ ॥

ಪರಮ ಮಂಗಲಮೂರ್ತಿ ಗುಹ ಗಣ । ಪರ ಜತೆಯೊಳಾಡುತ್ತ ದೇವಿಯ ।
ಸಿರಿ ಪದಾಬ್ಜವ ಭಜಿಸಿ ಸಂತಸ । ಭರಿತನಾಗಿ ॥ ೫ ॥

ದಶ ಮುಖಾತ್ಮಜನಿರಲು ಕಾಣುತ । ಪಶು ಪತಿಯು ದಯದಿಂದಲವನನು ।
ನಸುನಗುತ ತೆಗೆದಪ್ಪಿ ಮಿಗೆ ಮ । ನ್ನಿಸುತ ನುಡಿದ ॥ ೬ ॥

ರಾಗ – ಮಧ್ಯಮಾವತಿ – ಏಕತಾಳ

ಮೆಚ್ಚಿದೆ ಮಗನೆ ನಾ ನಿನ್ನ ಸದ್ಗುಣಕೆ । ನೆಚ್ಚಿನ ಶಿಷ್ಯನು ಎನ್ನಯ ಮನಕೆ ॥
ಮಚ್ಚರವೆಳ್ಳಿನಿತಿಲ್ಲವು ಜಗದಿ । ಕೆಚ್ಚೆದೆ ಭಟನಪ್ಪೆ ಮುಂದೆ ಸಂಗರದಿ ॥ ೧ ॥

ಇಲ್ಲಿಗೆ ನೀ ಬಂದು ಕೆಲಗಾಲವಾಯ್ತು । ಬಿಲ್ಲ ವಿದ್ಯೆಯನೆನ್ನೊಳ್ ಕಲಿತೆ ಲೇಸಾಯ್ತು ॥
ಅಲ್ಲಿಹ ನಿನ್ನ ತಾಯ್ತಂದೆಯರುಗಳು । ನಿಲ್ಲದೆ ಶೋಕವ ಮಾಳ್ಪರು ಕೇಳು ॥ ೨ ॥

ಕನಕ ಲಂಕೆಯನೈದಿ ಧರ್ಮ ಮಾರ್ಗದಲಿ । ವಿನಯ ವಿಕ್ರಮ ಸತ್ಯ ನಿತ್ಯ ಶಾಂತಿಯಲಿ ॥
ವನಜನಾಭನ ಮೃದು ಪದವ ನಿಶ್ಚಲದಿ । ನೆನೆಯಲು ನಿನ್ನಾಭೀಷ್ಟವನೀವ ದಯದಿ ॥ ೩ ॥

ಎಂದು ಶ್ರೀಕರ ಕಮಲವನೆತ್ತಿ ಶಿವನು । ಮುಂದೆ ಮೂಜಗದಿ ಸತ್ಕೀರ್ತಿಯ ನೀನು ॥
ಹೊಂದಿ ಬಾಳೆಂದತಿಕಾಯನ ಮುದದಿ । ಚಂದದಿ ಹರಸೆ ವಂದಿಸುತೆಂದ ನಯದಿ ॥ ೪ ॥

ಭಾಮಿನಿ

ದೇವ ದೇವರ ದೇವ ಮಮ ಗುರು । ದೇವ ನೀ ಶರ ವಿದ್ಯೆಯನು ಸ । ದ್ಭಾವದಿಂದೆನಗರುಹಿ ಜಗದೊಳು ಖ್ಯಾತನಪ್ಪಂತೆ ॥ ಓವಿದೆಯಲಾ ದೇವ ದಕ್ಷಿಣೆ । ಆವುದೀಯಲಿ ಎಂಬ ವಿವರವ। ನೀ ವಲಿದು ಪೇಳಿದೊಡದನು ನಾನೀವೆ ಭಕುತಿಯಲಿ ॥ ೧ ॥

ವಾರ್ಧಿಕ

ಭಾವಜಾರಿಯು ಪೇಳ್ದ ಗುರು ದಕ್ಷಿಣೆಯನೀವ । ಭಾವವಿದೆ ಭೀಷಣದ ಸಂಗರದ ರಂಗದೊಳ್ । ಜೀವಕವಗಡ ಬಪ್ಪುದಾದೊಡಂ ನಾಂ ಕಪಟ ಯುದ್ಧಮಂ ಮಾಡೆನೆಂದು ॥ ಪಾವನದೊಳೆನ್ನ ಪದದಾವರೆಲಿ ಶಪಥಮಂ । ಸಾವಧಾನವ ಮಾಡದೆನಗಿತ್ತೆಯಾದೊಡದು। ವೇ ವಿಹಿತ ದಕ್ಷಿಣೆಯು ಎನಲದಂ ಕೇಳ್ದಾಗ ರಾವಣಾತ್ಮಜನೆಂದನು ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಪಂಚ ವದನನೆ ಲಾಲಿಸೈ ತವ । ವಾಂಛಿತದ ದಕ್ಷಿಣೆಯನೀವೊಡೆ । ನಾಂ ಚಲಿಸುವವನಲ್ಲ ದಿಟ ನಿ । ರ್ವಂಚನೆಯೊಳು ॥ ೧ ॥

ಮಾಡುವೆನು ತವ ಶ್ರೀ ಪದಾಬ್ಜದಿ । ನೋಡುವುದು ಮಮ ಸುಪ್ರತಿಜ್ಞೆಯ । ನಾಡುವೆನು

ಸಂಗರದಿ ಖಾಡಾ । ಖಾಡಿಯಾಗಿ ॥ ೨ ॥

ತ್ರಾಣದಿಂ ಸುಭಟರೊಳು ಸೆಣಸಲು । ಪ್ರಾಣ ಭಯದೊಳಧರ್ಮ ಯುದ್ಧವ । ಆನೆಸಗೆ ತಪ್ಪಿದೊಡಿದಕೆ ನಿ । ನ್ನಾಣೆಯಿಹುದು ॥ ೩ ॥

ವಾರ್ಧಿಕ

ಭಾಪು ಮೆಚ್ಚಿದೆ ಮಗನೆ ವಿಮಲ ಗುರು ಭಕ್ತಿಗಾಂ । ನೀ ಪರಮ ಶಿಷ್ಯನೆನಗಹುದು ಮೂಜಗದಿ ಪ್ರ । ತಾಪನಹೆ ಬವರದೊಳಗಹಿತರಸುವನು ತೆಗೆವ ಈ ಮಹಾ ಪಾಶುಪತವ ॥ ರೋಪವನು ನಿನಗೀವೆನಿದಕೊಳ್ಳೆನುತ್ತ ಗುಣ । ದೀಪನಹನತಿಕಾಯಗಿತ್ತು ಪರಸಿದೊಡವಂ । ಆ ಪಿನಾಕಿಗೆ ನಮಿಸಿ ಬಳಿಕ ಪರಶಿವೆಯ ಶ್ರೀಪದಕೆರಗಲವಳೆಂದಳು ॥ ೧ ॥

ರಾಗ – ಶಂಕರಾಭರಣ – ತ್ರಿವುಡೆ ತಾಳ

ಏಳು ಮಗನೇ ವಿಮಲ ಹೃದಯನೆ । ಶೂಲಿ ಸನ್ನಿಭ ಶೌರ್ಯನೆ ॥ ಕೇಳುವೆನು ಬಂದೆರಗಿ ದಂದವ । ಪೇಳು ನೀನು ॥ ೧ ॥

ತಾಯೆ ಶಂಕರ ಪ್ರೀಯೆ ನೀ ಮಹ । ಮ್ಮಾಯೆ ಪೂರ್ಣದಯಾಮಯೆಯೆ ॥ ಶ್ರೀಯೆ ವರದೆ ಮೂಕಾಂಬೆ ಲಾಲಿಸು । ಪ್ರೀಯದಿಂದ ॥ ೨ ॥

ತಂದೆ ತಾಯಿಯರಾಣತಿಯ ಪಡೆ । ದಿಂದು ಧರನೆಡೆಗೈದುತ ॥ ಚಂದದಿಂ ಶರವಿದ್ಯೆ ಕಲಿತೆನು । ಒಂದೆ ಮನದಿ ॥ ೩ ॥

ನಿನ್ನ ಮಕ್ಕಳ ಸಹಿತಲೆನ್ನನು । ಅನ್ಯನಿವನೆಂದೆನ್ನುತ ॥ ಭಿನ್ನ ಭೇದವನಿಡದೆ ಕಾಯ್ದಿಹ। ಅನ್ನಪೂರ್ಣೆ ॥ ೪ ॥

ಹಲವು ಕಾಲವ ಕಳೆದಿಹೆನು ನಿ । ನ್ನೊಲುಮೆಯೊಳು ಗುಹ ಗಣಪರ ॥ ಕೆಳೆತನವು ಲಭಿಸಿದುದು ಭಾಗ್ಯವು । ತಿಳಿಯಲೆನಗೆ ॥ ೫ ॥

ಜನಕ ಜನನಿಯರೆನ್ನ ಕಾಣದೆ । ಮನದಿ ಕೊರಗುತಲಿರ್ಪರು ॥ ಸನುಮತದಿ ನೀ ಹರಸಿ ಕಳುಹಿಸು । ಮನೆಗೆ ದಯದಿ ॥ ೬ ॥

ರಾಗ – ಸಾರಂಗ – ಅಷ್ಟತಾಳ

ಅತಿಕಾಯ ಕೇಳನ್ನ ಸೊಲ್ಲ । ನಿ । ನ್ನತುಲ ಸದ್ಗುಣಕೆಣೆಯಿಲ್ಲ ॥ ಮತಿಯುತನಹುದೆನ್ನ। ಸುತರೊಡನಾಡಿ ಸ । ತ್ಪಥದಿ ನಡೆದೆ ಎಲ್ಲ । ಗತಿಹಿತನಾಗುತ ॥ ೧ ॥

ನಿನ್ನ ಕಳುಹಲೆನ್ನ ಮನಸು । ಬಾರ । ದಿನ್ನು ಬೇಸರವದನೆಣಿಸು ॥ ನಿನ್ನ ಪೆತ್ತಿಹ ಮಾತೆ। ಧಾನ್ಯಮಾಲಿನಿ ಬಲು ಧನ್ಯೆ ಸನ್ಮಾನ್ಯೆಯು । ನಿರ್ಣಯವೀ ನುಡಿ ॥ ೨ ॥

ಪರ ಸತಿ ಪರ ಧನಂಗಳೊಳು । ಮನ । ವಿರಿಸಲು ಬಾಳುವೆ ಹಾಳು ॥ ದುರುಳರ ಸ್ನೇಹದಿ। ಸಿರಿ ಕರಗುಗು ಬುದ್ಧಿ । ಕುರುಡಕ್ಕು ಅದರಿಂದೆ । ಚ್ಚರದಿ ನೀ ನಡೆ ಮುಂದೆ ॥ ೩ ॥

ಛಲದಂಶ ಸುಭಟರೊಳ್ ಧುರದಿ । ಜಗ । ಭಲೆಯೆನೆ ಸೆಣಸು ನಿಶ್ಚಲದಿ ॥ ಕಲಿಯಾಗಿ ಮೆರೆಯೆಂದು । ಪೊಳೆವ ಕತ್ತಿಯನತಿ । ಬಲಗೀಯಲದನು ಕೈ । ಗೊಳುತಭಿವಂದಿಸಿ ॥ ೪ ॥

ಪೇಳುವೆ ಬಾಳಿನ ಗುಟ್ಟು । ಲಕ್ಷ್ಮೀ । ಲೋಲನ ನೆನೆ ಮನವಿಟ್ಟು ॥ ಮೇಲಾಗಿ ನಡೆದು

ಕೃ। ಪಾಳುವ ಕರುಣದಿ । ಮೂಲೋಕದೊಳು ಕೀರ್ತಿ । ತಾಳಿ ಬಾಳೆಲೊ ಕಂದ ॥ ೫ ॥

ಪಾವನ ಹೃದಯದೊಳೊಲಿದು । ದುರ್ಗಾ । ದೇವಿಯು ಹರಸಲು ಮಣಿದು ॥ ರಾವಣಾತ್ಮಜನು ಮ । ತ್ತಾ ವಿನಾಯಕ ಮುಖ್ಯ । ದೇವರ್ಕಳಪ್ಪಣೆ । ತಾ ವಿನಯದಿಗೊಂಡು ॥ ೬ ॥

ಕಂದ

ಘನದುತ್ಸಹದಿಂ ತನ್ನಯ । ಮನೆಗೈದಿದ ಮಗನಂ ಕಂಡತಿ ಸಂಭ್ರಮದಿಂ ॥ ವಿನಯದಿ ಬಹು ಪರಿ ಮನ್ನಿಸು । ತನುನಯದಿಂ ಧಾನ್ಯಮಾಲಿನಿಯು ಬಳಿಕೆಂದಳ್ ॥೪ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಮಗನೆ ಕೇಳ್ಳೈ ಜಾತವಿದ್ಯೆಯ । ನಗಜೆಯರಸನು ಕಲಿಸಿದನೆ ನಿ ।
ನ್ನಗಣಿತದ ಗುಣಕೊಲಿ ದನೆಂಬಾ । ಬಗೆಯನರುಹು ॥ ೧ ॥

ಚಿತ್ತವಿಸು ಧನುರ್ವೇದವನು ಮುದ । ವೆತ್ತು ಎನಗೋದಿಸುತ ಶಿವನೊಲಿ ।
ದಿತ್ತನಾ ಪಾಶುಪತ ಶರವಿದ । ನಿತ್ತ ನೋಡೈ ॥ ೨ ॥

ಬಿಟ್ಟು ಹೋದುದು ಕಟ್ಟ ಕಡೆಯಲಿ । ಗುಟ್ಟನೊಂದನು ನಿನ್ನೊಳರುಹಲು ।
ಕೊಟ್ಟಳೀ ಶಕ್ತಿಯನಗಜೆ ದಯ । ವಿಟ್ಟು ಎನಗೆ ॥ ೩ ॥

ಈ ತೆರದೊಳೆಲ್ಲವನು ಪೇಳುತ । ಮಾತೆಗೊಂದಿಸಿ ಪೊರಟು ಕೆಳೆಯರ ।
ವ್ರಾತ ಕೂಡುತಲಾಟ ಕೂಟದಿ । ಪ್ರೀತನಾಗೆ ॥ ೪ ॥

ವಾರ್ಧಿಕ

ಹಸುಳೆಯರು ಕೇಳಿರೈ ಮುಂದಾದ ಕಥನಮಂ । ಬಿಸಜಮುಖಿ ಧಾನ್ಯಮಾಲಿನಿ ಮನದಿ ಯೋಚಿಸುತ । ಕುಶಲದಿಂದಗ್ರಜಂಗಿತ್ತಿಹೆನು ಭಾಷೆಯನ್ನದ ಸಲಿಸದೊಡೆ ಜೀವದಿ ॥ ರಸೆಯೊಳಿದ್ದೇನು ಫಲವೆನ್ನಾತ್ಮಜಂಗಿದಂ । ಉಸುರಲಿನ್ನಾವ ತೆರದಿಂದೆನುತ ಶೋಕದಿಂ । ದೆಸೆಗೆಟ್ಟು ಬಸವಳಿದು ಕೃಶಳಾಗಿ ರೋದಿಸುತಲಿರ್ಪುದಂ ಕೆಳೆಯರಿಂದ ॥ ೧ ॥

ಭಾಮಿನಿ

ಅಸಮ ಬಲನತಿಕಾಯನರಿತು ನಿ । ಮಿಷದಿ ಮಂದಿರಕೈದಿ ಮಾತೆಯ । ಕೃಶ ಶರೀರವ ಕಂಡು ಕೌತುಕಬಟ್ಟು ದೈನ್ಯದಲಿ ॥ ವ್ಯಸನವೇಕೆಲೆ ತಾಯೆ ಮಿಗೆ ರೋ । ದಿಸುವ ಕಾರಣ ಯಾವುದೆಲ್ಲವ । ನುಸುರು ಎನ್ನೊಡನೆನಲು ದುಃಖವ ತಡೆದು ಪೇಳಿದಳು ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಮಗನೆ ಭಾಗ್ಯದ ಮಣಿಯೆ ಲಾಲಿಸು । ವಿಗಡ ಬಲನೆನ್ನಣ್ಣ ಶೋಣಿತ । ನಗರಪಾಲಕ ಚಂದ್ರಕೇತನು । ದುಗುಡದಿಂದ ॥ ೧ ॥

ಕಂಗೆಡುತಲೈತಂದು ಎನ್ನೊಡ । ನಿಂಗಿತವನರುಹಲ್ಕೆ ಮರುಕದಿ । ಹಿಂಗದವನೊಳು ನುಡಿದೆ ನಾ ಬಹಿರಂಗದೊಳಗೆ ॥ ೨ ॥

ಎನ್ನ ಮಗನತಿಕಾಯನಿಂದಲಿ । ನಿನ್ನ ವೈರಿಯ ಸದೆ ಬಡಿಯದಿರ । ಲಿನ್ನು ನಾ ನಿನ್ನನುಜೆಯಲ್ಲವು ಎನ್ನುತವಗೆ ॥ ೩ ॥

ಕೊಟ್ಟೆ ಭಾಷೆಯ ನಿನ್ನ ಮಾವಗೆ । ಗುಟ್ಟನರಿಯಲು ಬಳಿಕ ನಾ ಕಂ । ಗೆಟ್ಟನಿದ ನಡೆಸದೊಡೆ ಜೀವವ । ನಿಟ್ಟು ಫಲವೆ ॥ ೪ ॥

ಬೇಸರಪ್ಪುದು ಪೇಳಲೆನಗಾ । ವಾಸವನ ಸದೆ ಬಡಿದು ಎನ್ನಯ । ಭಾಷೆ ಸಲಿಸಲು ನಿನಗೆ ಮುಂದಕೆ । ಲೇಸು ಮಗನೆ ॥ ೫ ॥

ಕಂದ

ಎಂದೀ ಪರಿಯಿಂ ನುಡಿದಾ । ಕಂದಿದ ಮೊಗದಾ ತಾಯ್ ಕಣ್ ಬಿಂದುವನೆರೆ ಕಂ ॥ ಡಂದದ ತಾನೊರೆಸುತ ದಶ । ಕಂಧರ ಸುತ ನಿಜ ಜನನಿಗೆ ಧೈರ್ಯವ ನುಡಿದಂ ॥ ೧ ॥

ರಾಗ – ಮಾರವಿ – ಏಕತಾಳ

ಮಾತೆಯೆ ನೀನಿದ । ಕೇತಕಳುವೆ ಛೇ । ನಾ ತೆರಳುತ ದಿವಿಗೆ ॥ ಖಾತಿಯೊಳಾ ಪುರು । ಹೂತನ ಸಮರದಿ । ಘಾತಿಪೆ ಬಿಡು ಚಿಂತೆ ॥ ೧ ॥

ಬಡಿದಟ್ಟುವೆ ಸುರ । ಗಡಣವ ದಿಟ ಕಂ । ಗೆಡಿಸುವೆ ದಿಗಧಿಪರ ॥ ಮೃಡ ವಿಧಿಗಳು ಮುನಿ । ದಡ ಹಾಯ್ದೊಡೆ ದೃಢ । ಗೆಡಿಸುತ ಸೈ ಬಡೆವೆ ॥ ೨ ॥

ಬಲ ವೈರಿಯ ಬೆಂ । ಬಲಕೈತಹ ಶ್ರೀ । ಜಲಜದಳಾಕ್ಷನನು ॥ ಅಳುಕದೆ ನಿಜ ಭುಜ । ಬಲದಿ ಸೆಣಸಿ ಭಲೆ । ಭಲೆಯೆನಿಸುವೆ ಧುರದಿ ॥ ೩ ॥

ಇದಕೀಗಲೆ ತ । ಪ್ಪಿದೆನಾದೊಡೆ ನಿ । ನ್ನುದರದಿ ದಶಶಿರಗೆ ॥ ಉದಿಸಿದವನೆ ಹರಿ । ಪದ ಭಜಕನೆ ಮೇಣ್ ಕದನಗಲಿಯೆ ತಾನು ॥ ೪ ॥

ಕಿಡಿಯಾದೊಡೆ ಹೇ । ರಡವಿಯ ಸುಡದೇ । ಬಿಡುವದೆ ನೋಡಿಂದು ॥ ಘಡ ಸುರಪನ ಪಡೆ । ಗಡಲನು ಕಡೆಯಲು ಕೊಡು ನೇಮವನೊಲಿದು ॥ ೫ ॥

ವಾರ್ಧಿಕ

ಮಲ್ಲ ಬಲನತಿಕಾಯನೆಂದ ಮಾತಂ ಕೇಳ್ದು । ಉಲ್ಲಾಸದಿಂದವನ ತೆಗೆದಪ್ಪಿ ಶಕ್ರನಂ । ಗೆಲ್ವ ವಿವರಂಗಳಂ ನಯ ನೀತಿಯಿಂದರುಹಿ ಸಮರದೊಳ್ ಶೌರ್ಯದಿಂದ ॥ ಪುಲ್ಲನಾಭನ ಮೆಚ್ಚಿಸೆಂದು ಸಂತಸದಿ ಕರ । ಪಲ್ಲವವ ಮಗನ ಮಸ್ತಕಕಿಟ್ಟು ಪರಸಿದೊಡೆ । ನಿಲ್ಲದತಿ ವೇಗದಿಂ ಪಿತನನುಮತಿಯಗೊಳಲು ಪೊರಟನಸುರೇಶನೆಡೆಗೆ ॥ ೧ ॥

ಭಾಮಿನಿ

ಸಂಖ್ಯೆಯಿಲ್ಲದ ಭಾಗ್ಯದಾಗರ । ಲಂಕೆಯೊಳು ನಿಜ ಪುತ್ರ ಬಾಂಧವ । ರಿಂ ಕದನಗಲಿ ದೈತ್ಯರಿಂ ಸಭೆ ಮೆರೆಯೆ ವಿಭವದಲಿ ॥ ಶಂಕರನ ಕಿಂಕರನು ತ್ರಿಜಗ ಭ । ಯಂಕರನು ಲಂಕೇಶ ಮೀಸೆಯ । ಕೊಂಕ ತೀಡುತ ರತ್ನಖಚಿತಾಸನದಿ ಕುಳಿತೆಂದ ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಕೇಳಿರೈ ಸುವಿಶಾಲ ಮತಿಗಳು । ಕಾಳಗದಿ ಹೆಸರಾಂತ ಚತುರ ಬಿ ।

ಲ್ಲಾಳುಗಳು ಜಗಜಟ್ಟಿಗಳು ನಾ । ಪೇಳುವದನು ॥ ೧ ॥

ಸಿಂಧು ಮಧ್ಯದೊಳಖಿಲ ಸಂಪದ । ದಿಂದ ಮೆರೆವೀ ಕನಕಲಂಕೆಯ ।
ನಿಂದು ಪೊರೆವ ಸುಯೋಗವೆನಗದು । ಬಂದುದೆಂತು ॥ ೨ ॥

ವಿಧಿ ತ್ರಿಯಂಬಕರೊಲ್ಮೆ ಮೇಣ್ ನಿ । ಮ್ಮೆದೆಯ ಸಾಹಸ ಬಲ್ಮೆಯಿನಿತಿರ ।
ಲದುವೆನಗೆ ದಿಟ ಗೆಲ್ಮೆಯೀ ನೆಲ । ಕೊದಗೆ ಮೇಲ್ಮೆ ॥ ೩ ॥

ಕಾಲಕಳೆಯದೆ ಜಗದಿ ಮೆರೆವಾ । ಭೂಲಲಾಮರ ಧುರದಿ ಸೋಲಿಸಿ ।
ಮೇಲೆ ಸಗ್ಗವ ನುಗ್ಗಿ ಕೋಟೆಯ ಹಾಳುಗೆಡವಿ ॥ ೪ ॥

ಸುಧೆಯ ಪಾನದೊಳುಬ್ಬಿ ಕೊಬ್ಬಿದ । ತ್ರಿದಶರೇಂದ್ರನ ಸಹಿತ ದಿಗಧಿಪ ।
ರಧಟನುರೆ ಸದೆ ಬಡಿದು ಪಾತಾ । ಳದಲಿ ಮೆರೆವ ॥ ೫ ॥

ಘೋರ ವಿಷದುಗ್ರಾಹಿಗಳ ಹಂ । ಕಾರ ನಿಲಿಸುತ ಮೂಜಗದಿ ಜಯ ।
ಭೇರಿ ಬಾರಿಸಿದೆ ಮಗಿದಿರು ಇ । ನ್ನಾರು ವಿಧಿಯೋ ॥ ೬ ॥

ಆ ಮಹಿಮ ನಮ್ಮನ್ವಯದಿ ಪ್ರಪಿ । ತಾಮಹನು ಎನಗಾಗಿರಲು ಸಂ ।
ಗ್ರಾಮಕೈತಹನಲ್ಲ ಮತ್ತಾ । ಸೋಮಧರನು ॥ ೭ ॥

ಎನ್ನ ತಪಕೊಲಿದಹಿತರಾ ಕೊರ । ಳನ್ನಿರಿವ ಹಿಮಕಿರಣ ಹಾಸವ ।
ಮನ್ನಿಸುತಲೆನಗಿತ್ತಿರಲು ಧುರ । ಕಿನ್ನು ಬಹನೆ ॥ ೮ ॥

ವಾರ್ಧಿಕ

ಮೂ ಧರೆಯೊಳಿರ್ಪ ಸುಭಟರ್ಕಳಂ ಗೆಲ್ದೆ ನಿ । ನ್ನಾದೊಡುಳಿದಿಹನೊಬ್ಬ ಬಿರ್ದಿಲರ
ನೆವದಿ ನ । ಮ್ಮೀ ಧರಾಮಾತೆಯಳ ವೀರಪುತ್ರ ಸುಮಾಲಿ ಮಾಲಿಯರ ತಲೆಯಗಡಿದ ॥
ಖೇದವಪ್ಪುದು ಮನಕೆ ಹಾ. . . ನಮುಗಹಿತ । ನಾದ ಮಾಧವನ ಕಾದಿ ಗೆಲಲೆಮಗವನ ।
ಬಾಧೆ ಮುಂದಿಲ್ಲವೆಂದಾ ದಶಾನನ ನುಡಿಯಲ್ಯೆದುತತಿಕಾಯ ನಮಿಸೆ ॥ ೧ ॥

ರಾಗ – ಕಾಂಬೋಧಿ – ಝಂಪೆತಾಳ

ಪೊಡಮಟ್ಟ ತನುಭವನ । ಹಿಡಿದೆತ್ತಿ ನಸು ನಗುತ । ನುಡಿದನೆಲೆ ಮಗನೆ ನೀನಿಂದು ॥
ಒಡನಾಡಿಗಳ ಬಿಟ್ಟು । ಒಡಲಿಗಂಗಿಯತೊಟ್ಟು । ದೃಢ ಚಾಪ ಶರವಿಡಿದ ಗುಟ್ಟು ॥ ೧ ॥

ಯುದ್ಧಕಾರೊಳು ಪೋಪ । ಉದ್ಧಟವಿದೇನ್ ಕೋಪ । ಸುದ್ಧಿ ಪೇಳೆನಲು ಕೇಳ್ದಾಗ ॥
ಗದ್ದುಗೆಯನೇರ್ದ ಪಿತ । ಗಿದ್ದ ಸಂಗತಿಯ ತಾ ಶ್ರದ್ಧೆಯಿಂ ವಿವರಿಸಿದ ನಿಂತು ॥ ೨ ॥

ರಾಗ – ಸೌರಾಷ್ಟ – ಅಷ್ಟತಾಳ

ಮಾತ ಲಾಲಿಸು ಬಂದ । ರೀತಿಯನೆಲ್ಲವ । ತಾತ ಕೇಳು । ಎನ್ನ । ಮಾತುಲಸಹ ಶಶಿ ।
ಕೇತನ ಧುರದೊಳು । ತಾತ ಕೇಳು ॥ ೧ ॥

ದಿವಿಜೇಂದ್ರ ಗೆಲಿದು ಮ । ತ್ತವಮಾನಗೊಳಿಸಲು । ತಾತ ಕೇಳು । ಬಲು ।
ಜವದೊಳ್ಯೆದುತ ಹದ । ನವ ಮಾತೆಗರುಹಲು । ತಾತ ಕೇಳು ॥ ೨ ॥

ಬಿಡುಗಣ್ಣರೊಡೆಯನ । ಕೆಡಹಿಪೆ ಸಮರದಿ । ತಾತ ಕೇಳು । ಎನ್ನ । ಹುಡುಗನೆಂದೆನುತಲಿ।

ಒಡನೆಯಿತ್ತಳು ಭಾಷೆ ತಾತ ಕೇಳು ॥ ೩ ॥

ಮಾತೆಯಾಣತಿಗೊಳು । ತಾತುರದಿಂ ಬಂದೆ । ತಾತ ಕೇಳು । ಎನ್ನ । ನೀ ತಿಳಿದನುವಿತ್ತು ಪ್ರೀತಿಯೊಳ್ ಕಳುಹಿಸು । ತಾತ ಕೇಳು ॥ ೪ ॥

ಭಾಮಿನಿ

ಸಾಯದಿಹ ವಿಬುಧರೊಳು ಸಮರಕ । ಜೇಯ ಬಲನಪ್ಪಣೆಯ ಕೇಳಲು ।
ಕಾಯವಿದು ನಾರಾಯಣನ ಗೆಲಲೆಂದು ಯೋಚಿಸುತ ॥
ಪ್ರೀಯದಿಂದಲಿ ನುಡಿದನಾ ವ । ಜ್ರಾಯುಧನ ನೀ ಧುರದಿ ಸೋಲಿಸಿ ।
ಬಾಯೆನುತ ಖಳರಾಯ ಮಗನನು ಪರಸಿ ಬೀಳ್ಗೊಟ್ಟ ॥ ೧ ॥

ರಾಗ –ಸೌರಾಷ್ಟ – ತ್ರಿವುಡೆ

ದೈತ್ಯ ಕುಲ ಸಾಮ್ರಾಟನಾಜ್ಞೆಯ । ಹೊತ್ತು ಮಾವನ ಸಹಿತ ಗಜ ಹಯ । ರತ್ನ ರಥ ಬಲಗಳನು ತಾ ನೆರ । ಹುತ್ತ ಭರದಿ ॥ ೧ ॥

ಚಂಡೆ ಡಿಂಡಿಮ ಭೇರಿ ನಾದದಿ । ಚಂಡಿಕಾ ಧ್ವಜವೆತ್ತಿ ಮಾಗಧ । ತಂಡ ಜೈ ಎನಲೇರ್ದ ರಥವನಖಂಡ ಬಲನು ॥ ೨ ॥

ಬರಲು ಮಾರ್ಗದಿ ವಿಮಲ ಗುಣ ಸ । ಧ್ಭರಿತ ದ್ವಿಜರನು ಕಂಡು ಮಂಗಲ । ಕರವೆನುತ ಮನ್ನಿಸುತಲವರಿಂ । ಹರಕೆಗೊಂಡು ॥ ೩ ॥

ಪಡೆ ಸಹಿತ ನಡೆವಬ್ಬರಕೆ ಧರೆ । ನಡುಗೆ ದಿಗ್ದಂತಿಗಳು ಘೀಳಿಡೆ । ಕಡಲ ಗರ್ಭದ ಬಡಬ ಗುಡುಗಲು । ನಡೆದು ಸ್ವರಕೆ ॥ ೪ ॥

ಧಾಳಿಯಿಟ್ಟೊಡೆ ಕಾಣುತಾ ಸುರ । ರಾಳುಗಳು ಕಡೆಯಲ್ಕೆ ವಿವರವ । ಪೇಳಲವರೈತಂದರಾ ಸುರ । ಪಾಲನೆಡೆಗೆ ॥ ೫ ॥

ರಾಗ – ಮುಖಾರಿ – ಏಕತಾಳ

ಚಿತ್ತವಿ ಸಮರ ಕುಲಾಬ್ಧಿ ಪೂರ್ಣ ಚಂದ್ರ । ವೈರಿ ಗಜ ಮೃಗೇಂದ್ರ । ವಾರ್ತೆಯನೊಂದ ರುಹುವೆವು ಮಾಹೇಂದ್ರ ॥ ಧಾತ್ರಿಯೊಳಿಹ ದೊಡ್ಡ । ಗಾತ್ರದೊಬ್ಬ ಖಳ । ದೈತ್ಯರಗೂಡುತ । ಮುತ್ತಿದ ಸಗ್ಗವ ॥ ೧ ॥

ಆ ಲಂಕೆಯರಸನನುಜನಂತೆ । ಅತಿಕಾಯನಂತೆ । ಮೂರ್ಲೋಕದೊಳಗೆ ಸುಭಟನಂತೆ॥ ತಾಳಿದ ಶಪಥವ । ಪೇಳಲು ಮಾತೆಯು । ಕೇಳಿ ರುಧಿರಪುರ । ಪಾಲನ ಸಹಿತ ॥ ೨ ॥

ಈಟಿ ಕಠಾರಿ ಪರಶು ಕುಂತನಾನಾಯುಧವಾಂತ । ಕೋಟಿ ರಕ್ಕಸರ ದಂಡು ಬಂತ ॥ ಘೋಟಿಕವೇರಿ ನ । ಮ್ಗೆಟನವರ್ಗೆರ । ಡೇಟನು ಬಿಗಿದು ಗ । ಲಾಟೆಯ ಮಾಡಿ ॥ ೩ ॥

ನಿಂದು ನಮನು ಬಾರ್ ಜೋರ್ ಮಾಡಿ । ನೀವ್ ಬೇಗದೊಳೋಡಿ । ಇಂದು ನಿಮೊಳು ಖಾಡ ಖಾಡಿ ॥ ಬಂದಿಹೆ ಸಂಗರ । ಕೆಂದೆನುತ್ತ ಮಾ । ಹೇಂದ್ರಗರುಹಿ ಎನ । ಲ್ಬಂದೆವು ದೊರೆಯೇ ॥ ೪ ॥

ಸೊಕ್ಕಿದ ರಕ್ಕಸರೊಳು ಮಾರಾಂತು । ನಾವ್ ಜೈಸುವದೆಂತು । ಮೂರ್ಕಣ್ಣಾ ದೇವಿಗ್ರೆಲ್ಲಗೊಂತು॥ ಅಕ್ಕರೆಯಿಂ ಬಲು । ರೊಕ್ಕಕೊಡಲು ನಾ । ವೊಕ್ಕಲು ಪೋಪೆವು । ಮಕ್ಕಳು

ಸಹಿತ ॥ ೫ ॥

ಕಂದ

ಬಾಗಿಲ ರಕ್ಷಕರೆಂದುದ । ತಾ ಗಮನಿಸುತ್ತ ಕೇಳ್ದತಿ ಕೋಪದೊಳಾ ಶತ ॥ ಯಾಗನು ಸುರ ದಿಕ್ಪಾಲರೊ । ಳಾಗಲೆ ನುಡಿದನು ಮುಂದಿನ ಕಾರ್ಯದ ಹದನಂ ॥ ೧ ॥

ರಾಗ – ಕೇದಾರಗೌಳ – ಝಂಪೆತಾಳ

ಕೇಳಿದಿರೆ ವಾರತೆಯನು । ನಮ್ಮಮರ । ರೇಳಿಗೆಯ ಕೇಳಿ ಖಳನು ॥ ತಾಳಿ ಮತ್ಸರವ ಮನದಿ । ಬಲ ಸಹಿತ । ಧಾಳಿಗೈದಿಹನು ಛಲದಿ ॥ ೧ ॥

ಹೇಡಿ ಶಶಿಕೇತ ಖಳನು । ಪಿಂತೆ ಧುರ । ಮಾಡಿಯೋಡಿದ ಭಂಡನು ॥ ಕೂಡಿ ದಶ ಮೊಗನ ಮಗನಾ । ಬಂದನೇ । ತೋಡುವೆನು ಕೆಂಗರುಳ ನಾ ॥ ೨ ॥

ಅದರಿಂದ ಪಡೆಯಾಳ್ಗಳ । ಮೇಣ್ ಕದನ ವಿಧಿ ಬಲ್ಲ ಬಿಲ್ಲಾಳ್ಗಳ ॥ ವದಗಿಸುತಲೀಕ್ಷಣದಲಿ। ಸಪ್ತ ದೆಸೆ । ಯಧಿಪರೆಲ್ಲರು ಸಹಿತಲಿ ॥ ೩ ॥

ಭಾಮಿನಿ

ಅದ್ರಿ ಮರ್ದನ ಯುದ್ಧ ಕಲೆಯೊಳ್ಪ್ರ । ಸಿದ್ಧರಿಗೆ ಕಟ್ಟಾಜ್ಞೆಯನು ಕೊಡು । ತುದ್ಧತ ಪರಾಕ್ರಮದಿ ಬಲ ಸಹ ಬಂದು ರಕ್ಕಸರ ॥ ನಿರ್ದಯದಿ ಹಲಬರ ಕೆಡಹಿ ಕಂ । ಡೆದ್ದು ರಾವಣ ಸೂನು ಬರಲತಿ । ರೌದ್ರ ಮುಖನಾಗುತ್ತಲಗ್ನಿಯು ತಡೆವುತಿಂತೆಂದ ॥ ೧ ॥

ರಾಗ – ಕಾಂಬೋಧಿ – ಝಂಪೆ ತಾಳ

ಫಡ ದನುಜ ನಿಲ್ಲೆಲವೊ । ಪೊಡವಿಯುಳಿದೆಮ್ಮ ಸ್ವರ । ಕೊಡನೆ ಪಡೆಗೂಡಿ ಬಂದೆಯಲ॥ ನಡೆವುದೊಳ್ಳಿತು ಹಿಂದೆ । ಅಡಿಯನಿಟ್ಟೊಡೆ ಮುಂದೆ । ಸುಡುವೆ ನಿನ್ನೊಡಲ ನಾನಿಂದೆ ॥ ೧॥

ಸಾಕೆಲವೊ ಬಾಯ್ಗಳಲಿ । ವಾಕುಗಳ ನೂಕಿದೊಡೆ । ಲೋಕ ಮೆಚ್ಚುವದೆ ಜಯ ನಿನಗೆ॥ ಸೋಕುವದೆ ಸತ್ವವಿರ । ಲೀ ಕಣೆಯ ಕೆಡಹೆನುತ । ನೇಕ ಬಾಣವನೆಚ್ಚ ಸಹಸಿ ॥ ೨ ॥

ಎಚ್ಚ ಶರಗಳನು ನೂರ್ । ನುಚ್ಚುಗೈದ್ದನಲ ಪಲ್ । ಗಚ್ಚಿ ಹೂಂಕರಿಸಿ ಭರದಿಂದ ॥ ಕಿಚ್ಚುಗುಳ್ವ ಶಕ್ತಿ ತೆಗೆ । ದೆಚ್ಚೊಡತಿಕಾಯನದ । ಕೊಚ್ಚಿ ಕೆಡಹುತಲೆಂದನವಗೆ ॥ ೩ ॥

ಸಪ್ತಾರ್ಚಿ ನಿನ್ನ ಸಾ । ಮರ್ಥ್ಯದೊಳವನು ಕಂಡೆ । ನತ್ತ ಮರಳುವದು ಅಲ್ಲದೊಡೆ ॥ ಸತ್ವವಿರೆ ತಡೆಯೆನುತ । ಪತ್ತು ಕೋಲ್ಗಳನೆಸೆಯೆ । ಮತ್ತೆ ಸಮರದೊಳನಲ ಕಾಣೆ ॥ ೪ ॥

ವಾರ್ಧಿಕ

ಆಗ್ನೇಯ ದೆಸೆಯಧಿಪನಾಹವದ ರಂಗದಿಂ । ಭಗ್ನನಾಗುತ ಮರಳಲತಿಕಾಯ ನಿಜ ಧನು। ರ್ಲಗ್ನ ಬಾಣದೊಳಿದಿರ್ ನಿಂದಮರ ವೃಂದಮಂ ನಂದಗೆಡಿಸಲು ಕಾಣುತ ॥ ಅಗ್ನಿ ನಯನಂದದೊಳ್ ಕಾಲನತಿ ಕೋಪದಿಂ । ಮಗ್ನನಾಗುತಲಸುರರಿಂದೆನ್ನ ಪದವಿಗತಿ । ವಿಘ್ನ ಮಾಯ್ತೆನುತಲುದ್ದಂಡ ಬಲ ದಂಡಮಂ ಕೊಂಡು ತಾನಿದಿರಾದನು ॥ ೧ ॥

ರಾಗ – ಮಾರವಿ – ಏಕತಾಳ

ಭಾಪುರೆ ಕರ್ಬುರ । ಭೂಪಾತ್ಮಜ ನಿ । ಷ್ಪಾಪ ಕೃಶಾನುವನು ॥ ರೋಪದಿ ಗೆಲಿದ ಪ್ರ ।

ತಾಪವನೀಗಲೆ । ನಾ ಪರಿಹರಿಸುವೆನು ॥ ೧ ॥

ಸುಡು ನಿನ್ನಯ ಬಾಯ್ । ಬಡುಕತನವ ಎ । ನ್ನೊಡನಾಡದಿರೆಲವೊ ॥ ಮೃಡನೊಳು ಕಾದಿದ । ಕಡುಹನು ತಿಳಿದಿಹೆ । ನಡೆ ಹಿಂದಕೆ ಭರದಿ ॥ ೨ ॥

ಜಗ ಕಂಟಕ ನಿ । ನ್ನಗಣಿತ ಸಾಹಸ । ಬಗೆಯ ಪರೀಕ್ಷಿಸುವೆ ॥ ಮೃಗ ಧರನನು ಮರೆ । ಹೊಗು ನೀನೆನುತಲಿ । ತೆಗೆಯಲು ದಂಡವನು ॥ ೩ ॥

ಕಾಣುತಲದನಾ । ಕೌಣಪ ನಿಜ ಸು । ತ್ರಾಣದೊಳಾಕ್ಷಣದಿ ॥ ನಾಣನೆಳೆದು ರವಿ । ಬಾಣದೊಳವನನು । ಕ್ಷೀಣಗೊಳಿಸಲಂದು ॥ ೪ ॥

ಕಂದ

ದಂಡ ಧರಂ ಕಾಲ್ದೆಗೆಯಲ್ । ಕಂಡತಿ ಕೋಪದಿ ನೈಋತಿ ಕುಂತವನುಂ ಕೈ । ಗೊಂಡಡ ಹಾಯ್ದುತಲಾ ದಶ । ರುಂಡಾತ್ಮಜನಂ ಕೆಣಕುತ ಪೇಳಿದನಾಗಳ್ ॥ ೧ ॥

ರಾಗ – ಶಂಕರಾಭರಣ – ಮಟ್ಟೆತಾಳ

ಎಲವೊ ದನುಜ ತನುಜ ಸಮರ । ದೊಳಗೆ ಜವನ ಗೆಲಿದ ವೀರ ॥ ಛಲವು ನಡೆಯದೆನ್ನೊಳ್ ತೀರ । ತಳುವದೋಡೆಲ ॥ ೧ ॥

ನಿನ್ನ ಪೌರುಷವನು ಕಾಂಬ । ಎನ್ನಪೇಕ್ಷೆಯನ್ನು ತುಂಬ ॥ ಇನ್ನು ತೋರಿಸೆನುತಲಂಬ। ಕೆನ್ನೆಗೆಚ್ಚನು ॥ ೨ ॥

ಬರುವ ಶರವ ನಡುವೆ ಕೊಚ್ಚಿ । ಕೆರಳಿ ನಿಋತಿ ಪಲ್ಲ ಕಚ್ಚಿ ॥ ಸರಳ ಮಳೆಯೊಳವನ ಮುಚ್ಚಿ । ಮೆರೆಯೆ ಗರ್ವದಿ ॥ ೩ ॥

ಆ ಸುರೇಂದ್ರ ವೈರಿ ತನಯ । ರೋಷದಿಂದಲವನ ಕಣೆಯ । ನಾಶಗೈದು ಕ್ಷಣದಿ ಹಣೆಯ ಘಾಸಿ ಮಾಡಲು ॥ ೪ ॥

ಭಾಮಿನಿ

ಈ ಸಮರ ಕಲಿ ಕೇಸರಿಯ ಗೆಲು । ವಾಸೆಯಿದು ಪೂರೈಸದೆನ್ನುತ । ಬೇಸರದಿ ದೀರ್ಘೇಶ ಧುರದಿಂ ತಾ ಸರಿಯಲಂದು ॥ ಮೀಸೆ ಹೊತ್ತ ಮಹಾ ಸುಭಟರಿರ । ಲೀ ಸ್ವರಕ್ಕಪಹಾಸವಾಯ್ತೆನು। ತಾ ಸರಿತ್ಪತಿ ಪಾಶ ಬೀಸಿ ದಶಾಸ್ಯ ಸುತಗೆಂದ ॥ ೧ ॥

ರಾಗ – ನಾದನಾಮ ಕ್ರಿಯೆ – ಅಷ್ಟತಾಳ

ಖಳ ಕುಲದೊಳಗತಿ ಶ್ರೇಷ್ಠನೆ । ನಮ್ಮೊಳ್ । ಕೆಲಬರ ಗೆಲ್ದ ಬಲಿಷ್ಠನೆ ॥ ನಿಲಿಸುವೆನದನು ನೋಡೆನ್ನುತ । ಶರ । ಗಳ ವರುಣನು ಬಿಡೆ ಕಾಣುತ ॥ ೧ ॥

ಸಿಟ್ಟಿನಿಂದಲಿ ಮುರಿದದರನು । ಪೇಳ್ದ । ನಟ್ಟಹಾಸದೊಳತಿಕಾಯನು ॥ ಥಟ್ಟನೆ ಹಿಂದಕೆ ಸರಿಯಲು । ಬಲು । ಶ್ರೇಷ್ಠವು ನಿನಗದು ನೋಡಲು ॥ ೨ ॥

ಪಿಂತೆ ಸರಿವ ಹೇಡಿ ನಾನಲ್ಲ । ಎನ್ನೊ । ಳಂತಿಂಥಾದುದ ಪೇಳದಿರು ಖುಲ್ಲ ॥ ಪಂಥ ಪೌರುಷಗಳ ತೋರದೆ । ನೀನಿ । ನ್ನೆಂಥಾವನೆಂಬುದು ತಿಳಿವುದೆ ॥ ೩ ॥

ಅಡಿನ ಗಳ ಮೊಲೆಯಂದದಿ । ಬಾಯೊ । ಳಾಡಲು ಫಲವೇನು ಸಮರದಿ ॥ ಹೂಡು

ಶರೌಘವನೆನ್ನುತ ॥ ಶರ । ಮೋಡದಿ ಮುಸುಕಿ ರಾವಣ ಸುತ ॥ ೪ ॥

ಕಂದ

ಕಡಲೊಡೆಯಂ ಭರದಿಂ ಸುರ । ಪಡೆ ಎಡೆಯೊಳ್ ಧೃತಿಗೆಡುತ್ತ ಹಿಂದಡಿಯಿಡಲುಂ ॥ ಕಿಡಿಯಿಡುತಾಗ ಸಮೀರಂ । ಕಡು ದೃಢದಿಂ ಧ್ವಜಮಮಂ ಹಾರಿಸಿ ತಡದೆಂದಂ ॥ ೧ ॥

ರಾಗ – ಕೇದಾರಗೌಳ – ಅಷ್ಟತಾಳ

ನಿಲ್ಲು ನಿಲ್ಲೆಲೊ ಧುರ । ಮಲ್ಲನೆ ಶೌರ್ಯದೊ । ಳೆಲ್ಲರ ಗೆಲಿದ ಗರ್ವ ॥ ನಿಲ್ಲಿಪೆನೀಕ್ಷಣ । ದಲ್ಲಿ ಎನುತ ಬಾಣ । ಬಿಲ್ಲಿಗೇರಿಸು ತೆಚ್ಚನು ॥ ೧ ॥

ಬಿಟ್ಟಸ್ತ್ರವನು ತರಿ । ದೊಟ್ಟುತಲಾ ಗುಣ । ಶ್ರೇಷ್ಠ ರಾವಣ ಸುತನು ॥ ದಿಟ್ಟಿಸುತಚಲಾಸ್ತ್ರ । ಬಿಟ್ಟೊಡೆ ತಾಳದೆ । ಘಟ್ಟನೆ ಸರಿದ ವಾಯು ॥ ೨ ॥

ವಾರ್ಧಿಕ

ಪೃಥ್ವಿಯ ಚರಾಚರದ ಜೀವ ಚೇತನ ವಾತ । ನತ್ತ ಸರಿಯಲ್ ಜಗದ್ಭೀಷಣನ ರಾವಣನ। ಪುತ್ರನಹಿತಪ್ರಬಲ ಬಲಮಥನನತುಲ ಬಲನತಿಕಾಯ ಬರಲೀಕ್ಷಿಸಿ ॥ ಉತ್ತರಾಧಿಪ ತನ್ನ ವಿತ್ತಾಧಿಕಾರಕಾ । ಪತ್ತು ಬಂತೆನುತ ಮನುಜನ ಭುಜವನೇರ್ದು ಖತಿ । ವೆತ್ತಿ ಮುಂದೊತ್ತಿ ಕೂರ್ಗತ್ತಿಯಿಂ ಝಳಪಿಸುತ ಮತ್ತವನ ತಡೆದೆಂದನು ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಘೋರ ದಾನವ ನಿಲ್ಲೆಲವೊ ನಿ । ನ್ನೂರನುಳಿದೀ ಸಗ್ಗ ನುಗ್ಗಿದ । ಕಾರುಭಾರವನಿಳಿಸುವೆನು ರಣ ಧಾರಣಿಯೊಳು ॥ ೧ ॥

ಸಾಕೆಲವೊ ಬಾಯ್ಬಡುಕತನ ರಣ । ಭೀಕರನು ನೀನಾದೊಡೆನ್ನಯ । ಈ ಕಣೆಯ ಸವಿ ನೋಡೆನುತ ಬಿಡ । ಲಾ ಕುಬೇರ ॥ ೨ ॥

ಘಾಸಿಗೈಯ್ಯಲು ಕಂಡು ರೋಷಾ । ವೇಶದಿಂದ ಮಹಾ ಸಹಸಿ ರವಿ । ಭಾಸುರದ ಕಣೆ ಬಿಡಲು ನಾಣ್ಯಾ । ಧೀಶ ನಡೆದ ॥ ೩ ॥

ಭಾಮಿನಿ

ಖಂಡ ಪರಶುವಿನಾಪ್ತನಾಹವ । ಮಂಡಲದೊಳಪಜಯವ ಹೊಂದಲು । ಖಂಡೆಯವ ನೆಲಕೊಗೆದು ಭರದಿಂ ಕಾಲ್ದೆಗೆಯಲಂದು ॥ ಗಂಡೆದೆಯ ಭಟ ನಿಜ ಕರದ ಕೋ । ದಂಡವನು ಝೇಂಕರಿಸೆ ಕೇಳ್ದಾ । ರುಂಡಮಾಲನು ತಡೆಯೆ ಕಾಣುತಲೆಂದನತಿಕಾಯ ॥ ೧ ॥

ರಾಗ – ಕಾಂಬೋಧಿ – ಝಂಪೆತಾಳ

ಬಂದಿರೇ ಗುರುದೇವ । ರಿಂದು ಬಲು ಸಾಹಸದಿ । ನಿಂದಿರೇ ಶಿಷ್ಯನೊಳು ಧುರಕೆ ॥ ಚಂದವಾದುದು ಬೇಗ । ಬಂದ ಪಥದೊಳು ಪೋಗ । ಲಂದವೆನೆ ಶಿವ ನುಡಿದನಾಗ ॥ ೧॥

ಕೌಣಪನೆ ಕೇಳೆನ್ನೊ । ಳ್ಬಾಣ ವಿದ್ಯೆಯ ಕಲಿತ । ಜಾಣ್ಮೆಯನು ಸಂಗರದೊಳಿಂದು ॥ ಕಾಣಲೈತಂದೆ ಸು । ತ್ರಾಣದಿಂ ಗೆಲಲೆನ್ನ । ಕ್ಷೋಣಿಯೊಳು ಮಾನ್ಯ ನೀನಹುದು ॥ ೨ ॥

ಯುದ್ಧ ವಿದ್ಯೆಯ ನೀಡಿ । ತಿದ್ದಿ ಬುದ್ಧಿಯನಾಡಿ ॥ ಕ್ಷುದ್ರ ಷಡ್ವೈರಿಗಳ ದೂಡಿ ॥ ಶುದ್ಧಮತಿ

ಯಾಗುವಂ । ತುದ್ಧರಿಸ್ಯೆಯೆನ್ನ । ಶುದ್ಧಾತ್ಮ ನಿನಗೆ ಶರಣೆಂಬ ॥ ೩ ॥

ರುದ್ರನನಿತರೊಳೆಂದ । ಯುದ್ಧರಂಗದ ನಿಯಮ । ಹೊದ್ದಿ ನಡೆಯುವದೆ ಲೇಸೆನಲು ॥ ಉದ್ಧಟದಿ ಸೆಳೆದು ಬಿಲ್ । ತಿದ್ದಿ ಕೋಲ್ಗಳನೆಸೆಯೆ । ಮಧ್ಯದೊಳ್ಕಡಿದು ಪುರ ಹರನು ॥೪॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಸಿಟ್ಟಿನಿಂದಲಿ ಮೃತ್ಯು ಶರವನು । ಬಿಟ್ಟೊಡದ ನಿಮಿಷಾರ್ಧದಿಂ ತಾ । ದಿಟ್ಟಿಸಿ ಮಹಾಕಾಲ ಮೃತ್ಯುವ । ನಟ್ಟಿ ಕೆಡಹಿ ॥ ೧ ॥

ಕೆಂಗಿಡಿಯನುಗುಳ್ವಂಬ ಸಂಧಿಸಿ । ತುಂಗ ಬಲ ಬಿಡಲಿವನೊಳ್ಕಾದುವ । ದಂಗವಲ್ಲವೆನುತ್ತ ಲಂಗಜ । ಭಂಗ ನಡೆಯೆ ॥ ೨ ॥

ವಾರ್ಧಿಕ

ಕದನಗಲಿ ಹರ್ಯಕ್ಷ ಮಾರಾಂತ ದಿಗುಪಾಲ । ರಥಟನುರೆ ಭಂಗಿಸುತಲಷ್ಟ ವಸುಗಳ ಗೆಲಿದು ॥ ಕದನ ಕಲೆಯೊಳ್ ಸುಪ್ರಸಿದ್ಧ ಭಾನುಕ ರೇಣುಕಾದಿ ಸುರಭಟರ ಕೆಡಹಿ ॥ ಅದುಭುತ ಪ್ರತಾಪದೊಳ್ ವಿಲಯ ಭೈರವನಂತೆ । ಕದನ ಕೋಲಾಹಲನು ವಿಜಯದಿಂದಿರಲತ್ತ । ವಿಧು ಕೇತ ಗದೆಗೊಂಡು ಇದಿರಾಗಲಿದ ಕಂಡು ತ್ರಿದಶಪತಿ ಸುತನೆಂದನು ॥ ೧ ॥

ರಾಗ – ಸೌರಾಷ್ಟ – ತ್ರಿವುಡೆ ತಾಳ

ಮೂಢ ಮತಿ ಶಶಿಕೇತ ಪಿತನೊಳು । ಮಾಡಿ ಸಮರವ ಸೋತುವೋಡಿದ । ಹೇಡಿ ಪುನರಪಿ ಬಂದೆ ಹಿಂದಿನ । ಪಾಡ ಮರೆದು ॥ ೧ ॥

ಹಿಂದೆಗೈದಾ ಪರಿಭವವ ನೆನೆ । ದಿಂದದನು ಸಲಿಸುವೊಡೆ ಬಂದೆನು । ಕಂದನಾಗಿಹೆ ನಿನ್ನ ತಂದೆಯ । ಮುಂದೆ ಕಳುಹು ॥ ೨ ॥

ಅಡಿಯನಿಡದಾ ಹೆಳವನಿಗೆ ಪೇ । ರ್ಗಡಲಗೊಡವೆಯದೇಕೆ ಬರಿದೇ । ಕಡುಹಿನೊಳು ಗೆಲಲೆನ್ನ ಬರುವನು । ಒಡನೆ ಪಿತನು ॥ ೩ ॥

ಮಾತಿನೊಳು ಬಲು ಚತುರನಹೆ ನಿ । ಭೀ್ರತ ಸಂಗರ ಸಿಂಗನಾದೊಡೆ । ಧಾತುಗೆಡದಿರು ಎನುತ ಶಸ್ತ್ರ । ವ್ರಾತವೆಚ್ಚ ॥ ೪ ॥

ಎಸೆದ ಕೋಲ್ಗಳ ಕಡಿಯೆ ಕಾಣುತ । ಲಸುರನತಿ ಪಲ್ಮೊಸೆದು ಶಕ್ರನ । ಹಸುಳೆಯುದರವ ತಿವಿಯೆ ಗದೆಯೊಳು । ಬಸವಳಿದನು ॥ ೫ ॥

ಕಂದ

ಅನುವರದೊಳಗೆ ಜಯಂತನ । ಘನತೆಯ ನಿಲಿಸುತಲಬ್ಬರದಿಂ ಬಹ ಖಳನಂ ॥ ಅನಿಮಿಷರೊಡೆಯಂ ಕಾಣುತ । ಮುನಿಸಿಂ ಮುಂದೈದಿ ತಡೆದು ಪೇಳಿದ ಭರದಿಂ ॥ ೧ ॥

ರಾಗ ಕಾಂಬೋಧಿ – ಝಂಪೆ ತಾಳ

ಪೂತುರೇ ದನುಜ ಶಶಿ । ಕೇತ ಸಮರದಿ ಪಿಂತೆ । ಸೋತು ಎನ್ನೊಳು ಜೀವದಿಂದ ॥ ಭೂತಳವ ಸೇರ್ದು ಬಳಿ । ಕಾತುರದಿ ಬಂದ ಪರಿ ಯೇತಕೆಂಬುದ ತಿಳುಹು ಜವದಿ ॥೧॥

ಭಳಿರೆಲವೊ ಸುರಪ ಕೊಳು । ಗುಳದೊಳಂದೆನ್ನ ಭುಜ । ಬಲದಿ ಕಾದುತ ಗೆಲವು ಸಿಗದೆ॥

ಬಲಗುಂದಿ ಮೋಸದೋಳ್ । ಗೆಲಿದ ನಿನಗೀಗ ಪ್ರತಿ । ಫಲವ ನಾ ಕೊಡಲು ಬಂದಿಹೆನು॥೨॥

ವೃತ್ರ ಬಲ ಜಂಭರನು । ಕತ್ತನರಿದಿಹ ಎನ್ನ । ಸತ್ವದ ವಿಚಾರವರಿಯದೆಯೆ ॥ ಧೂರ್ತ ತನದಿಂದಿದಿರು । ನಿತ್ತೆಯಾದೊಡೆ ನಿನಗೆ । ಮೃತ್ಯು ಸನ್ನಿಹಿತ ವಾಗಿಹುದು ॥ ೩ ॥

ಬಿಡು ಬಿಡಾ ಪೌರುಷವ । ಸುಡು ನಿನ್ನ ಗೌರವವ । ಅಡಿಯಿಡಲು ಸ್ವರಕೆ ನಮ್ಮವರು ॥ ಪಡೆ ಸಹಿತ ಭಯಗೂಡಿ ತಡೆಯದಡಗಿದ ಹೇಡಿ । ಪಡೆಗೆಲವನೊಡನೆ ಧುರ ಮಾಡಿ ॥ ೪ ॥

ರಾಗ – ಭೈರವಿ – ಅಷ್ಟತಾಳ

ದೈತ್ಯನ ನುಡಿಗಳನು । ಕೇಳುತ ಖತಿ । ವೆತ್ತು ಪುರಂದರನು ॥ ಸತ್ವದೊಳುರಿ ಶರ । ವೆತ್ತಿ ಬಿಸುಡಲೀಕ್ಷಿ । ಸುತ್ತ ಚಂದಿರ ಕೇತನು ॥ ೧ ॥

ಉದಕಾಸ್ತ್ರದಿಂದುರಿಯ । ನಂದಿಸುತ ಕೋ । ಪದಿ ಕೆರಳುತ ಗದೆಯ ॥ ತ್ರಿದಶಾಧಿಪನೆದೆ। ಬದಿಗಿಡಲದನು ತಾ । ಆದೆ ಬಿದ್ದು ಚೇತರಿಸಿ ॥ ೨ ॥

ಭಾಮಿನಿ

ಕೊಡಲಿ ಕಡಿತಕೆ ಹೆಮ್ಮರವು ತಲೆ । ಕೆಡೆದು ಪೊಡವಿಗೆ ಬೀಳ್ವ ತೆರದಿಂ । ದೊಡನೆ ಕುಲಿಶವನೆತ್ತಿ ಹೊಡೆಯಲು ಖಳನು ಮೈ ಮರೆಯೆ ॥ ದೃಢ ಬಲದೊಳೈರಾವತದ ಬೆ । ನ್ನಡರಿ ಮುಂದೈತರಲು ಕಾಣುತ । ತಡೆದು ನಿಂದತಿಕಾಯನೊಡನಿಂತೆಂದ ಸುರಪಾಲ ॥ ೧ ॥

ರಾಗ – ಪಂಚಾಗತಿ – ಮಟ್ಟೆ ತಾಳ

ಆರೊ ನೀನು ನಮ್ಮ ಪುರವ । ಸೇರಿ ಭರದಿ ಧುರದಿ ಬಲವ । ಗಾರುಗೆಡಿಸಿದಧಟ ನಿನ್ನ ಊರದಾವುದು ॥ ಆರು ಜನಕ ಪೆಸರದೇನು । ವಾರಣಾಶ್ವ ರಥ ಬಲಗಳ । ಸೇರಿ ಬಂದ ಕಾರ್ಯವೇನು । ಭೋರನುಸುರೆಲ ॥ ೧ ॥

ಜಲಜ ಭವ ಕುಲಾಬ್ಧಿ ಚಂದ್ರ । ಮೃಡನ ಭಜಕ ಖಳ ಕುಲೇಂದ್ರ । ಪೊಡವಿ ಲಂಕೆಯೊಡೆಯ ನವನ । ಹುಡುಗನೆನ್ನನು ॥ ನುಡಿವರತಿ ಶರೀರನೆಂದು । ಬಿಡದೆ ಮಾತುಳನ್ನ ನೆವದಿ । ಹಡೆದ ಮಾತೆಯಾಜ್ಞೆಯಿಂದ । ಒಡನೆ ಬಂದೆನು ॥ ೨ ॥

ರಾಗ – ಭೈರವಿ – ಏಕತಾಳ

ಮಾತೆಯ ಆಜ್ಞೆಯೊಳೆಮ್ಮ । ಸುರ । ವ್ರಾತವ ಗೆಲಿದಿಹ ಹಮ್ಮ ॥ ನೀ ತೋರಿದೊಡೀಕ್ಷಣದಿ। ರವಿ । ಜಾತನ ಕಾಣುವೆ ಜವದಿ ॥ ೧ ॥

ಕಾಲನ ಕಂಡಿಹೆ ಮೊದಲೆ । ಅದ । ಪೇಳದಿರೆನ್ನೊಳು ಮರುಳೆ ॥ ತೋಳ ಬಲುಹು ನಿನಗಿರಲು । ನಿಲು । ಕಾಳಗಕೆನ್ನೊಳಗೆನಲು ॥ ೨ ॥

ಕೇಳುತಲದ ಜಂಭಾರಿ । ನೀ । ಖೂಳನು ನಮಗತಿ ವೈರಿ ॥ ಬಾಳಗೆಡಿಪೆ ಕುಲಿಶದಲಿ । ಎಂ। ದಾಳುತನದಿ ಬರೆ ಕನಲಿ ॥ ೩ ॥

ಭಾಮಿನಿ

ಕಂಜಭವನಿತ್ತಾ ಮಹಾ ಶರ । ಮಂ ಜವದಿ ತೆಗೆದಾಗ ಬಿಡಲದು । ಅಂಜಲಿಯೊಳಿಹ

ಕುಲಿಶವನು ಕೊಂಡೋಡಿದಬ್ಬರಕೆ ॥ ಕುಂಜರವು ಬಲ ಭಂಜಕನ ಸಹಿ । ತಂಜಿ ಘೀಳಿಡುತೋಡೆ ಕಾಣುತ । ನಂಜುಗಳ ನಿಜ ಶಿಷ್ಯನಧಟಾನಲಕೆ ಬೆರಗಾದ ॥ ೧ ॥

ಕಂದ

ಕುಲಿಶವು ಕರದಿಂ ಪೋಗಲ್ । ಅಳುಕುತ ಸುರರೆರೆಯಂ ಘನ ಬಲಯುತನಿವನಂ ॥ ಗೆಲುವೆತ್ನವದೆಂತುಟೊ ಎನು । ತಲಿ ಕಮಲದಳಾಕ್ಷನ ನುತಿಸಿದ ಭಕ್ತಿಯೊಳುಂ ॥ ೧ ॥

ರಾಗ – ನೀಲಾಂಬರಿ – ರೂಪಕ ತಾಳ

ಶ್ರೀ ರಮಣೀ ಮನಮೋಹನ । ವಾರಿಜಲೋಚನ ಪಾವನ । ಮೂರುತಿ ಭುವನ ಜನಾರ್ಚಿತ। ಸಾರಸ ಭವ ನಮಿತ ॥ ಮಾರ ಜನಕ ದನುಜಾನ್ವಯ । ವಾರಿಧಿ ವಡಬ ಸುಜನ ಭಯ । ದೂರ ದಯಾನಿಧಿ ಗುಣಗಣ । ಪಾರ ಮಹಿಮ ಚರಣ ॥ ೧ ॥

ಖಗ ತತಿ ಪತಿ ನೂತನ ರಥ । ಸುಗುಣರಿಗೀವೆ ಮನೋರಥ । ಮೃಗಧರ ಬಾಂಧವ ಚಂದಿರ । ಖಗ ತೇಜ ಶರೀರ ॥ ಜಗದುದರನೆ ತವ ಪದಕಿದೊ । ಸೊಗದಿಂ ಬಾಗುವೆ ಬೇಗದೊ । ಳ್ಮಿಗೆ ಕೊಡು ಜಗಕೆ ಸಂಪದಮಂ । ನಗು ಮೊಗದಿಂ ಮುದಮಂ ॥ ೨ ॥

ದಶಶಿರ ಸುತನತಿಕಾಯನು । ಅಸಮ ಬಲನು ಧುರ ಧೀರನು । ವಿಶಮಾಹವದೊಳಗೆಮ್ಮನು। ದೆಸೆಗೆಡಿಸುತ ಖಳನು ॥ ಎಸೆದಿಹನವನನು ಕೊಲದಿರೆ । ರಸೆಯೊಳು ಸುಖ ದೊರಕದು ಖರೆ। ಅಸುರನಸುವ ತೆಗೆಯಲು ಬಾ । ಮಿಸುನಿ ವಸನ ಬಾ ಬಾ ॥ ೩ ॥

ವಾರ್ಧಿಕ

ಮಕ್ಕಳಿರ ಕೇಳಿ ಬಿರ್ದಿಲರಾಣ್ಮ ಪರಿ ಪರಿಯ । ದುಃಖದಿಂ ಶ್ರೀವರನ ನಿಜ ಮನದಿ ಧ್ಯಾನಿಸಲ್ । ರಕ್ಕಸಾರಿಯು ತಿಳಿದು ಸಿರಿಯೊಡನೆ ವಿವರಮಂ ಪೇಳ್ದು ಮಿಗೆ ವಹಿಲದಿಂದ॥ ಹಕ್ಕಿ ರಾಜನ ಹೆಗಲನೇರ್ದು ಸ್ವರಕೈದೆ ಕಂ । ಡುಕ್ಕಿದಾನಂದದಿಂದಮರ ತತಿ ಕೈಯೆತ್ತಿ । ಒಕ್ಕೊರಲ ನಾದದಿಂ ಘೇ ಉಘೇ ಎನಲವರ ಮನ್ನಿಸುತ ಶಕ್ರನಿಂದ ॥ ೧ ॥

ರಾಗ – ಸವಾಯ್ – ಏಕತಾಳ

ನಳಿನದಳಾಂಬಕ । ತಿಳಿಹುತ ಹದನವ । ಕಳಕಳಿಸುವ ಮೊಗ ಸುಳಿಗುರುಳ ॥ ಥಳ ಥಳಿಸುವ ಮಣಿ । ಗಳ ಭೂಷಣದೊಳು । ಬೆಳಗುವ ಕಂಬು ಚಕ್ರಾಬ್ಜಗಳ ॥ ೧ ॥

ಧರಿಸುವ ಕರದೊಳು । ಮಿರುಗುವ ಹೇಮಾಂ । ಬರದುಡಿಗೆಯ ಜಗ ಮೋಹನದ ॥ ಪರಿ ಪರಿ ಶೋಭಾ । ಕರದಿಂ ನಸು ನಗೆ । ವೆರಸುತಲೈತರೆ ಕಾಣುತದ ॥ ೨ ॥

ವಿನಯದೊಳತಿಕಾ । ಯನು ಬಲು ತೋಷದಿ । ಮನದೊಳಗೆಣಿಸಿದನಿಂತೆನುತ ॥ ಘನ ಮಹಿಮಾಕಾ । ರನ ನೋಡಿದೆ ನಾ । ನೆನುತ ಭಜಿಸೆ ಭಕ್ತಿಯೊಳಾತ ॥ ೩ ॥

ಚಂದಿರವನರುಹ । ಬಂಧು ಶತ ಪ್ರಭ । ಕಂದರ್ಪಾಮಿತ ಸುಂದರನೆ ॥ ಸಿಂಧು ಗಂಭೀರ ಮು । ಕುಂದ ಸಕಲ ಜಗ । ವಂದಿತ ಜನಮನ ಮಂದಿರನೆ ॥ ೪ ॥

ಮೋದದಿ ಧ್ರುವ ಪ್ರಹ । ಲ್ಲಾದರ ಪೊರೆದ ಮ । ಹೋದಧಿ ಮಂದಿರ ವಾಸ ನಮೊ ॥ ಮೇದಿನಿಯನು ಮೂರ್ । ಪಾದಗೈದ ಮಹಿಮೋದಯ ವಾಮನ ನಿನಗೆ ನಮೊ ॥ ೫ ॥

ವಿಧವಿಧ ಭಕುತಿಯೊಳ್ । ಮಧು ವೈರಿಯ ಮೃದು । ಪದವನು ಹೃತ್ಕಮಲದಿ ನುತಿಸಿ ॥ ಮದನ ಪಿತಗೆ ತಾ । ನಿದಿರಾಗುತ ಪೇ । ಳಿದ ನಸು ನಗುತತಿ ಮುದವೆರಸಿ ॥ ೬ ॥

ರಾಗ – ಕಾಂಬೋಧಿ – ಝಂಪೆ ತಾಳ

ಜಗದುದರ ಲಾಲಿಪುದು । ಭೃಗು ಮುನಿಯ ಶಾಪದಲಿ । ಬಗೆಬಗೆಯ ರೂಪವನು ತಳೆದು ಸಂಗರದಿ ॥ ವಿಗಡ ಖಳರುದರ ಬಗೆ । ದೊಗೆದು ಮೃತ್ಯುವಿಗಿತ್ತೆ । ನಗ ಹರನಿಗೊಲಿದಿತ್ತೆ ತ್ರಿಜಗದೊಡೆತನವ ॥ ೧ ॥

ತಿಳಿಯಲೆಲ್ಲಾ ಜಗವ । ಸಲಹುವ ಸ್ವತಂತ್ರನಹೆ । ಬಲು ಭಾಗ್ಯವಿರಲು ಫಲವಿಹುದೇನು ನಿನಗೆ । ನೆಲನ ಬೇಡಿದೆ ಅಯ್ಯೊ । ತಲೆಗಡಿದೆ ಜನನಿಯಳ । ಸಲಹದೇ ಪೋದೆ ಹರನುರಿಯಿಂದ ಮಗನ ॥ ೨ ॥

ನುಡಿಯಲೇನಾ ಕರ್ಮ । ಜಡಜಭವ ರುದ್ರ ಸುರ । ರೊಡೆಯ ಮುಖ್ಯರನು ಅಡಿಗಡಿಗೆ ಬಾಧಿಸಲು ॥ ಕಡು ಖೂಳರೆಂದೆಮ್ಮ । ನುಡಿದು ಹಂಗಿಪುದೇಕೆ । ಜಡಧಿ ಶಯನನೆ ನಿನ್ನ ಬೆನ್ನ ಬಿಟ್ಟಿರುವೆ ॥ ೩ ॥

ವಾರಿನಿಧಿ ಸದನದೊಳು । ಭೂರಿ ಭೀಕರ ವಿಷ ಧ । ರೋರಗನ ಹೆಡೆಯಡಿಯೊಳೂರೆಲ್ಲ ತಿರುಗಿ ॥ ಆರಾರ ಮನೆದೆಗೆದು । ದಾರ ಹೃದಯರ ತುಳಿದು । ಭಾರಿ ಚೆಲುವಿಕೆ ದಳೆದು ಮೆರೆವೆ ಸಿರಿ ಸಹಿತ ॥ ೪ ॥

ಗಾಢದಿಂದೊರಗಿ ಜಗ । ವಾಡಿಪುದನುಳಿದು ಹಾ । ರಾಡುತಿಹ ಖಗದ ಹೆಗಲನ್ನೇರಿ ಧುರವ ॥ ಮಾಡಿ ಎನ್ನಾಳ್ತನದ । ಗೂಢವನು ತಿಳಿಯಲೆಂ । ದೋಡಿ ಬಂದೆಯೊ ದೇವ ನಿನಗಿದೋ ನಮನ ॥ ೫ ॥

ರಾಗ – ಶಂಕರಾಭರಣ – ಏಕತಾಳ

ಸಿರಿಯ ರಮಣ ಕೇಳುತೆಂದ । ಚರಣ ಭಜಕರನ್ನು ಪೊರೆವ ॥
ಬಿರುದು ಇರಲು ಬಂದೆ ವಿಬುಧ ವರನ ಸಹಯಕೆ ॥ ೧ ॥

ಬಂದುದೊಳ್ಳಿತಾಯ್ತು ಸಿಂಧು । ಮಂದಿರನೆ ನಿನ್ನ ಪದವ ॥
ಚಂದದಿಂದ ಭಜಿಸಲೆನ್ನೊಳ್ ಕುಂದುಯೇನದು ॥ ೨ ॥

ಇಳೆಯ ದಾನ ಧರ್ಮಗಳನು । ಹಳಿದು ಮುಳಿದು ಸಾಧುಗಳನು ॥
ಬಳಲಿಸುತ್ತ ಮೆರೆವ ದನುಜ । ಕುಲದೊಳುದಿಸಿದೆ ॥ ೩ ॥

ಮುತ್ತು ಕೆಸರೊಳ್ ಬೆಳೆದೊಡದನು । ನೆತ್ತಿಗಿರಿಸೆ ಮೆರೆವರೇನು ॥
ಮತ್ತೆ ಕುಲದ ಮಾತಿದೇಕೆ। ರತ್ನ ಗುಣವಿರೆ ॥ ೪ ॥

ಆದೊಡೇಕೆ ಸಗ್ಗಕ್ಕೈದು । ತಾ ದಿವೌಕಸರನು ರಣದಿ ॥
ಕಾದಿ ಗೆಲಿದ ಹದನವೆನ್ನೊಳೋದು ಬೇಗನೆ ॥ ೫ ॥

ಮಾತೆ ಎನ್ನ ಮಾವಗಿತ್ತ । ಮಾತ ನಡೆಸೆ ಧುರದೊಳಮರ ॥
ವ್ರಾತ ಸಹಿತ ಸುರಪತಿಯನು ಧಾತುಗೆಡಿಸಿದೆ ॥ ೬ ॥

ರಾಗ – ಶಂಕರಾಭರಣ – ಮಟ್ಟೆ ತಾಳ

ಇಂದ್ರ ಮುಖ್ಯರಂದವನ್ನು । ಕುಂದಿಸಿದ ಮದಾಂಧನೆಲವೊ ॥
ಇಂದು ದನುಜ ವೃಂದ ವೈರಿ । ಬಂದೆ ಸಮರಕೆ ॥ ೧ ॥

ಧಾತ್ರಿಯೊಳಗೆ ಧೂರ್ತ ಖಳರ । ಕತ್ತನಿರಿದು ಹೊತ್ತ ಬಿರುದ ॥
ವ್ಯರ್ಥಗೈವೆ ಸತ್ವದಿಂ ಯ। ಥಾರ್ಥ ನೋಡೆಲ ॥ ೨ ॥

ಅಂಥ ಶೌರ್ಯ ಪಂಥ ಪಾಡು । ಏಂತು ನಿನ್ನೊಳ್ ಸ್ವಂತವಿರಲು ॥
ಗೊಂತು ಮಾಡು ಮುಂತೆನುತ ಶ್ರೀ । ಕಾಂತ ನುಡಿಯಲು ॥ ೩ ॥

ಕಂದ

ಹರಿಯಿಂತೆನೆ ಕೇಳ್ದಾ ದಶ । ಶಿರ ಸುತನತಿ ಸಂತಸದಿಂ ನಿಜ ಚಾಪವನುಂ ॥ ಕರದಿಂ
ಝೇವಡೆದಾ ಮುರ । ಹರನಿಂಗಿದಿರಾಗುತ ಘನ ಶೌರ್ಯದಿ ನುಡಿದಂ ॥ ೧ ॥

ರಾಗ – ಸೌರಾಷ್ಟ – ತ್ರಿವುಡೆತಾಳ

ಚಿತ್ತಜನ ಪಿತ ಕೇಳು ಸಮರ ಧ । ರಿತ್ರಿಯೊಳು ನೀ ಮುಳಿದು ಮದ್ಭುಜ ।
ಸತ್ವಗೆಡಿಸಿದೊಡಾನು ತವ ಪದ ಭಕ್ತನಲ್ಲ ॥ ೧ ॥

ಎಂದುದನು ಕೇಳುತ್ತ ಪರಮಾ । ನಂದದಿಂದರವಿಂದ ನಾಭನು ।
ಅಂದು ತನ್ನೊಳು ತಾನೆ ಯೋಚಿಸಿ । ಮುಂದೆ ನಡೆವ ॥ ೨ ॥

ಆ ಮಹಾ ರಾಮಾಯಣದಿ ರಣ । ಭೀಮನಹನತಿಕಾಯ ಶೌರ್ಯೋ ।
ದ್ಧಾಮ ಗುಣವೇನೆಂಬುದನು ಸಂ । ಗ್ರಾಮ ಮುಖದಿ ॥ ೩ ॥

ಜಗವು ಪೊಗಳುವ ತೆರದೊಳೀಕ್ಷಣ । ಬಗೆಯ ನೋಡುವೆನೆನುತ ಬಾಹ್ಯದೊ ।
ಳಗಧರನು ಕೋಪದಿ ದಶಾಸ್ಯನ । ಮಗಗೆ ನುಡಿದ ॥ ೪ ॥

ಹೇಡಿಯಂದದಿ ಬಾಯ ಪೌರುಷ । ವಾಡಲೇನ್ಫಲವಹುದೆಲವೊ ಘಡ ।
ಗಾಢ ಸಾಹಸವಿರಲು ಹಿಡಿ ಧನು । ಹೂಡು ಶರವ ॥ ೫ ॥

ಕೇಳುತತಿ ಬಲ ತೆಗೆದನುಗ್ರ । ಜ್ವಾಲೆ ಮಾಲೆಯನುಗುಳ್ವ ಕಣೆಯನು ।
ಶ್ರೀಲಲಾಮಂಗೆಸೆಯಲದರನು । ಹಾಳುಗೈಯ್ಯೆ ॥ ೬ ॥

ಝುಗಝುಗಿಪ ನಿಜ ಭುಜಗ ಬಾಣವ । ವಿಗಡ ಬಲ ತೆಗೆದಿಡಲು ಕಾಣುತ ।
ಲಗಧರನು ಖಗ ಶರದೊಳದ ಮುರಿದೊಗೆದು ನಭಕೆ ॥ ೭ ॥

ರಾಗ – ಶಂಕರಾಭರಣ – ಮಟ್ಟೆ ತಾಳ

ಪುಂಡರೀಕ ನಯನನಾ ಬ್ರ । ಹ್ಮಾಂಡ ಸುಡುವ ಬ್ರಹ್ಮ ಬಾಣ ॥
ಗೊಂಡು ದನುಜನುರಕೆ ಬಿಡಲು । ಕಂಡು ಶೌರ್ಯದಿ ॥ ೧ ॥

ಕಡಲಿನೊಡಲ ಬಡಬ ಗುಡುಗೆ । ಜಡಜ ಭವ ಮಹಾಸ್ತ್ರವನ್ನು ॥
ಬಿಡಲು ಶರಗಳೆರಡು ಕಾದಿ । ಯಡಗೆ ಕಾಣುತ ॥ ೨ ॥

ಮತ್ತೆ ಹರಿಯು ಭೀಕರಾ । ವರ್ತ ವಾಯು ಶರದಿ ಖಳನ ॥

ರತ್ನ ರಥವ ಸಹಿತಲಭ್ರ । ಕೆತ್ತಿ ಬಿಸುಡಲು ॥ ೩ ॥

ರಥವು ಘರ್ರೆನುತ್ತ ಗಗನ । ಪಥದಿ ಬುಗುರಿಯಂತೆ ತಿರುಗೆ ।
ಪೃಥುಲ ಬಲನು ನೆಗೆಯಲಸುರ ಮಥನ ಕಾಣುತ ॥ ೪ ॥

ಭಾಮಿನಿ

ಅಸಮ ವೈಷ್ಣವ ಶರವನಭಿ ಮಂ । ತ್ರಿಸುತ ಖೂಳನ ಕೊಲು ಎನುತ ತೆಗೆ । ದೆಸೆಯೆ ಕಾಣುತ ರಾವಣಾತ್ಮಜ ವಿಮಲ ಭಕುತಿಯೊಳು ॥ ಬಿಸಜನಯನ ಮುಕುಂದ ಚಿನುಮಯ। ನಸಮ ಮಹಿಮ ಕೃಪಾವನಧಿಯೆಂ । ದಸುರಹರನನು ನುತಿಸೆ ತಾಗದೆಯಂಬು ಮರಳಿದುದು ॥ ೧ ॥

ರಾಗ – ಭೈರವಿ – ಏಕತಾಳ

ಮರಳಿದ ಬಾಣವ ಕಂಡು । ಹರಿ । ಕೆರಳುತ ಶಾರ್ಙ್ಗವಗೊಂಡು ॥
ಭರದಿಂದಸುರನ ತಿವಿಯೆ । ನೆ । ತ್ತರು ಚಿರ್ರೆನುತಲಿ ಚಿಗಿಯೆ ॥ ೧ ॥

ಮೆಟ್ಟಿದ ದಾನವನೆದೆಯ । ಕೈ । ಮುಷ್ಟಿಯೊಳೆರಗಿದೊಡಾಯ ॥
ಗೆಟ್ಟೊರಗಲು ಕೊಲಲೆಂದೇ । ನಿಲು । ವಷ್ಟರೊಳೊರೆದಪೆ ಮುಂದೇ ॥ ೨ ॥

ಕಡೆಗಾಲದ ಭೈರವನೊ । ಮೇ । ಣ್ಗಡಲಿನ ಬಡಬಾನಲನೊ ॥
ಸಿಡಿಲೊಡೆವಂದದೊಳೆದ್ದು। ತಾ । ನುಡಿದ ಹರಿಗೆ ಭುಜ ಹೊಯ್ದು ॥ ೩ ॥

ಭಾಮಿನಿ

ನಿಶಿಯಸುರನಸುದೆಗೆದ ನಾಟಕ । ವಸುರರನು ನಂಬಿಸಿದ ವಂಚಕ । ಕೆಸರ ಮುಕ್ಕಿದ ಪಿಸುಣ ಬಸುರನು ಸೀಳಿದತಿ ಜಿಪುಣ ॥ ರಸೆಯ ಬೇಡಿದ ಕುಹಕ ಮಾತೆಯ । ಳಸು ಕಸಿದ ಕೊಲೆಗಡುಕ ನಿನ್ನಯ । ಅಸಮ ಚಕ್ರವದೆಲ್ಲಿ ತೆಗೆ ತೆಗೆಯೆನುತ ಬೊಬ್ಬಿರಿದೂ ॥ ೧ ॥

ವಾರ್ಧಿಕ

ಚಂಡಕರ ತೇಜದಿಂದುಜ್ವಲಿಪ ಶಕ್ತಿಯಂ । ಕೊಂಡು ನಿಜಭುಜ ಸಾಹಸತ್ವದಿಂದೆಸೆಯಲುರಿ। ಗೆಂಡಮಂ ಕಾರ್ದು ಬ್ರಹ್ಮಾಂಡ ಗರ್ಭನ ತಲೆಗೆ ಹೊಡೆಯೆ ಬರಸಿಡಿಲಂದದಿ ॥ ಚಂಡ ಶರ ಗಾಯದಿಂದೊಸರ್ವ ರುಧಿರಾಂಬುವಂ । ಕಂಡು ಕೆರಳಿದ ಮಹಾ ರುದ್ರನೋಲ್ ರೌದ್ರದಿಂ। ದಂಡಜನನುಳಿದು ಕೈಗೊಂಡನತ್ಯುಗ್ರದುದ್ದಂಡಬಲ ಶ್ರೀ ಚಕ್ರವ ॥ ೧ ॥

ರಾಗ – ಮಾರವಿ – ಏಕತಾಳ

ಘಡ ನೀಚನ ತಲೆ । ಗಡಿಯದೆ ಬಿಡೆನೆಂ । ದಡಿಯಿಡುತಲಿ ಮುಂದೆ ॥
ಒಡನಸುರನ ಕೊರ। ಳೆಡೆಗೆ ಬಿಡಲು ಬರ । ಸಿಡಿಲೊಡೆವಂದದಲಿ ॥ ೧ ॥

ಭುಗಿಲೆನ್ನುತ ಕಾ । ರ್ಬೊಗೆಗಾರುತಲುರಿ । ಧಗಿಸುತ ಕೆಂಗಿಡಿಯ ॥
ಉಗುಳುತ ಬರೆ ಮೂ । ಜಗ ಧಿಗಿಲೆನೆ ದಶ । ಮೊಗ ಮಗನೀಕ್ಷಿಸುತ ॥ ೨ ॥

ಪೃಥ್ವಿಯು ಬಾಯ್ ಬಿಡ । ಲೆತ್ತಿದ ನಿಜಭುಜ । ಸತ್ವದಿ ಮೃಡನೊಲಿದು ॥
ಇತ್ತ ಮಹಾಶರ। ವೊತ್ತಿ ಬಿಡಲುವುರಿ ಮುತ್ತಿತು ಮೂಜಗವ ॥ ೩ ॥

ವಾರ್ಧಿಕ

ಹಾರಿದಂ ಗದ್ದುಗೆಯನೊದ್ದು ಕಮಲೋದ್ಭವಂ । ಸಾರಿದಂ ಸುರಪ ಸಗ್ಗವ ಬಿಟ್ಟು ಹರಿಯೆಡೆಗೆ। ಜಾರಿದಂ ದಂಡಧರ ತನ್ನ ಪದವಿಯನುಳಿದು ಸೇರಿದಂ ಹರನ ಮರೆಯ ॥ ಮೀರಿದಂ ರವಿ ಕಾಲಚಕ್ರಮಂ ಹೆಡೆಯುಡಿದು । ಕಾರಿದಂ ಭೋಗೀಂದ್ರ ಗರಳ ಪ್ರವಾಹಮಂ । ಚೀರಿದಂ ಕರ್ಕಶ ಧ್ವನಿಯೊಳ್ ಪೊರಳ್ದು ಬಾಯಾರಿದಂ ವಿಹಗೇಂದ್ರನು ॥ ೧ ॥

ಭಾಮಿನಿ

ಉಭಯತರು ಬಿಟ್ಟಾಯುಧಗಳತಿ । ಪ್ರಭೆಯ ಬೀರುತ ಕ್ರೋಧ ಶಿಖಿಯೊಳು । ತ್ರಿಭುವನವು ಕೆಂಗೆಡಲು ಮಾರಾ ಮಾರಿ ತಮ್ಮೊಳಗೆ ॥ ರಭಸ ವಿರಸದಿ ಕಾದಲೋರ್ವಗು । ಲಭಿಸದಿರೆ ಜಯ ವೈರವನು ಕಳೆ । ದಭವಶರಕೀತೆರದಿ ನುಡಿದುದು ಚಕ್ರವೊಲವಿನಲಿ ॥ ೧ ॥

ರಾಗ – ಭೈರವಿ – ಝಂಪೆ ತಾಳ

ಭಳಿರೆಲವೊ ಪಾಶುಪತ । ಕಲಹ ನಮ್ಮೊಳಗೇಕೆ ।
ಗೆಲವು ಸೋಲುಗಳಿಲ್ಲ । ಬಲದಿ ಸರಿ ಸಮರು ॥ ೧ ॥

ಧರೆಯೊಳನ್ಯಾಯವನು । ಪರಿ ಪರಿಯೊಳೆಸಗುತಿಹ ।
ದುರುಳ ಕುಲದವನೊಡನೆ । ಮೆರೆವುದನು ಬಿಟ್ಟು ॥ ೨ ॥

ದೈತ್ಯ ಕುಲಮಥನ ಸ । ದ್ಭಕ್ತ ಜನ ಸುರಧೇನು ।
ಸತ್ಯ ಮೂರುತಿ ಹರಿಯ । ನೊತ್ತಿನೊಳಗಿರುವ ॥ ೩ ॥

ಅದರಿಂದಲವನ ಸುಲ । ಭದೊಳುಳಿದು ಎನ್ನೊಡನೆ ।
ಮುದದಿ ನೀ ಬಾರೆನುವ । ಸದಯಗುಸುರಿದನು ॥ ೪ ॥

ರಾಗ – ಮಧು ಮಾಧವಿ – ಏಕತಾಳ

ಎಲೆ ಸುದರ್ಶನ ಲಾಲಿಸೆನ್ನಯ ಮಾತ । ಬಲನತಿಕಾಯನನರಿಯೆಯ ಖ್ಯಾತ ॥
ಛಲದಂಕನ ಕಳಂಕ ಸುಗುಣ ಸುಂದರನು । ಸಲೆ ವೇದಶಾಸ್ತ್ರಂಗಳರಿತ ಕೋವಿದನು ॥ ೧ ॥

ಜಾತಿ ರೀತಿಯನುಳಿದಮಲ ಧರ್ಮದಲಿ । ನೀತಿಯುತನು ಹರಿಭಜಕ ಯುದ್ಧದಲಿ ॥
ಈತನು ಕಪಟವನೆಂದಿಗು ಮಾಡ । ಭೂತ ನಾಥನ ಪ್ರಿಯ ಶಿಷ್ಯನು ನೋಡ ॥ ೨ ॥

ಭರ್ಗನು ನಮ್ಮೀರ್ವರನು ಸೃಜಿಸುತ್ತ । ಶೀಘ್ರದಿ ಹರಿ ರಾವಣಾತ್ಮಜರ್ಗಿತ್ತ ।
ಅಗ್ರಜಾನುಜರಾಗಿ ನಾವು ನಮ್ಮೊಳಗೆ । ವಿಗ್ರಹವೆಸಗಲು ಕೊರತೆಯು ನಮಗೆ ॥ ೩ ॥

ನಿನ್ನೊಡೆಯನ ತೆರ ಕುಹಕ ವಂಚನೆಯ । ಎನ್ನೊಡೆಯನು ಮಾಡುವವನಲ್ಲ ತಿಳಿಯ ॥
ಚೆನ್ನಕೇಶವನ ನೀ ಬಿಟ್ಟು ಬಾ ಜತೆಗೆ । ಇನ್ನು ನಾವೈದುವನತಿಕಾಯನೆಡೆಗೆ ॥ ೪ ॥

ಭಾಮಿನಿ

ಹರಿ ಶರಾಯುಧ ಪಾಶುಪತಗಳು । ಪರಿಪರಿಯ ವಾದವನು ಮಾಡುತ । ಮರಳಿದವು ತಾವ್ ಬಂದ ಕಡೆಗಿನ್ನೆಂಬುದೇನೆಂದ ॥ ಮುರಮಥನನಿದನೆಲ್ಲ ನೋಡುತ । ಧರೆಯೊಳಿವನೆನಗಚ್ಚು ಮೆಚ್ಚಿನ । ಪರಮ ಭಕುತನು ಗೆಲ್ಲಲಸದಳವೆಂದು ಯೋಚಿಸುತ ॥ ೧ ॥

ಕಂದ

ನಸು ನಗುತತಿ ಸಂತಸದಿಂ । ದಶಮಸ್ತಕನಾತ್ಮಜನಮಿತ ಪರಾಕ್ರಮಕಂ ।
ಅಸುರಾರಿಯು ತಲೆದೂಗುತ । ಲುಸುರ್ದನವನ ಮೈದಡವುತ ಬಲು ಸಂಭ್ರಮದಿಂ॥ ೧
॥

ರಾಗ – ಬೇಗಡೆ – ಅಷ್ಟತಾಳ

ವೀರ ನಿಜಭುಜ ಶೌರ್ಯನತಿಕಾಯ । ಸಂಗರದಿ ನಿನ್ನನು । ಮೀರಿ ಹೋರುವರಾರು ಮೂರ್ಧರೆಯ ॥ ಭೂರಿ ಸುಭಟರೊಳ್ ತೋರಿದ್ಯೆ ಮದ । ನಾರಿ ಮುನಿದೊಡೆ ಜಾರ್ವನಲ್ಲವು। ದಾರ ಹೃದಯ ವಿಸ್ತಾರ ಜಲಧಿ ಗ । ಭೀರ ಚತುರ ಬಿಲ್ಗಾರನಹುದ್ಯೆ ॥ ೧ ॥

ಛೇದಿಸಿದೆ ಜಗದಾ ದುರಾತ್ಮರನು । ಕಂಡಿಲ್ಲವೀತೆರ । ನಾದ ಗಂಡೆದೆ ಕೈದುಗಾರನನು ॥ ಆ ದಶಾಸ್ಯಜನಾದೊಡೇನ್ ಸ । ತ್ವಾದಿ ವಿಮಲ ಗುಣೋದಯನು ಧನು । ರ್ವೇದ ಕೋವಿದ ಯೋಧನೆನ್ನೊಳು । ಕಾದಿ ವಿಜಯವ ಸಾಧಿಸಿದೆ ಭಲೆ ॥ ೨ ॥

ಉಂಟೆನಗೆ ದಶಕಂಠನೊಳು ಮುಂದೆ । ಭೀಕರ ಸಮರವದ । ಕಂಟಿಮಲೆವ ನಿನ್ನೆಂಟೆದೆಯ ನಿಂದೆ ॥ ಎಂಟು ದಿಕ್ಕಿಗೆ ನಾಂಟುವಂದದಿ । ಕುಂಟು ನೆವನವನುಂಟು ಮಾಡಿಯೆ । ತಂಟೆಗೈದೆ ಶ್ರೀ ಕಂಠನಾಣೆ ನಿ । ಷ್ಕಂಟಕದ ಕಡು ಭಂಟ ಸೈ ಸೈ ॥ ೩ ॥

ಮಚ್ಚರದೊಳೆನಗಿಚ್ಛೆಯಿಲ್ಲಿನ್ನು । ನಿನ್ನಚಲ ಕೆಚ್ಚಿನ । ಕಿಚ್ಚಿನುರಿಗಿದೊ ಬೆಚ್ಚಿದೆನು ನಾನು ॥ ಸ್ವಚ್ಛ ಮನದಿಂದುಚ್ಚರಿಸೆ ನಿ । ನ್ನಿಚ್ಛೆಯನು ಮನ ಮೆಚ್ಚಿ ಕೊಡುವೆನೆಂ । ದಚ್ಯುತನು ಕಲಿಗೆಚ್ಚರಿಸಲವ। ನರ್ಚಿಸಿದ ಮುದ ಹೆಚ್ಚಿ ಹರಿಯನು ॥ ೪ ॥

ರಾಗ – ಕಾಪಿ – ಅಷ್ಟತಾಳ

ಪಕ್ಷಿ ವಾಹನ ಶ್ರೀಧರ । ಸಕಲ ಲೋಕಾ । ಧ್ಯಕ್ಷ ಚಿನ್ಮಯ ಶ್ರೀಕರ ॥ ಅಕ್ಷಯಾತ್ಮಕ ಸುರ । ಪಕ್ಷ ವಂದಿತ ಶರ । ಜಾಕ್ಷ ದಾನವ ಮೂಲ । ಶಿಕ್ಷ ಸಜ್ಜನ ಕಾಲ ॥ ೧ ॥

ಅಂಬುಜಭವ ನಮಿತ । ಕಂಬು ಗದಾ ಚ । ಕ್ರಾಂಬುಜ ಧರ ಶೋಭಿತ ॥ ಅಂಬುಜನಾಭ ಹೇ । ಮಾಂಬರ ಧಾರಿ ಹೇ । ರಂಬಪಿತನ ಭಾವ । ನಂಬಿದವರ ದೇವ ॥ ೨ ॥

ವಿಶ್ವವೆ ನಿನ್ನುದರ । ಯೋಚಿಸಿ ನೋಡೆ । ವಿಶ್ವವೆಲ್ಲವು ಓಂಕಾರ ॥ ವಿಶ್ವನಾಯಕ ಪರ । ವಿಶ್ವ ಮೂಲಾಧಾರ । ವಿಶ್ವ ಜೀವರ ಕಾವ । ವಿಶ್ವ ವಂದಿತ ದೇವ ॥ ೩ ॥

ಧರೆಯೆಂಬ ಮಂಟಪದಿ । ಜೀವಿಗಳೆಂಬ । ಗರುವ ನಡಿಪೆ ಮುದದಿ ॥ ಪರಮ ನಾಟಕ ಧಾರಿ । ಮೆರೆವೆ ಲೀಲೆಯ ತೋರಿ । ಕರುಣದಿ ಜಗವನೆ । ಪೊರೆವ ಶ್ರೀ ಹರಿ ನೀನೆ ॥ ೪ ॥

ಕಂದ

ಕಂತು ಜನಕನಂ ಮಿಗೆ ತ । ನ್ನಂತರ್ಯದಿ ವಿಧವಿಧದಿಂ ನುತಿಸುತಲಾಗಂ ॥ ಪಂತಿ ಮುಖನ ತನುಜಂ ಬಳಿ । ಕಿಂತೆಂದನು ಕಮಲಲೋಚನಗೆ ಭಕ್ತಿಯೊಳುಂ ॥ ೧ ॥

ಭಾಮಿನಿ

ಹೇ ಜಗನ್ಮಯ ಕೇಳು ನಿನ್ನೊಡ । ನಾಜಿಯೊಳಗೀವರೆಗೆ ಸೆಣಸಲು । ಸಾಜ ಭುಜ ಬಲವೆನಗೆ ಕುಂದಿದುದಿಲ್ಲ ನಿನ್ನಾಣೆ ॥ ಮೂಜಗವು ಭಾಪೆನಲು ಹಳಚುವೆ ।

ನೀ ಜವದೊಳೊಲಿದೆನಗೆ ಮುಕುತಿಯ । ಮಾಜದೀಯೊ ಕೃಪಾವನಧಿ ಎಂದೆನುತ ಕೈಮುಗಿದ ॥ ೧ ॥

ವಾರ್ಧಿಕ

ಸತ್ವ ಗುಣಯುತನೆ ಕೇಳ್ ನಿನಗೆ ಮುಕ್ತಿಯ ಕೊಡಲು । ಹೊತ್ತಲ್ಲವಿದು ಮುಂದೆ ಹಲವು ಕಾಲವು ಕಳೆಯೆ । ಮಿತ್ರ ಕುಲದರಸರೊಳ್ ವೆಗ್ಗಳಂ ಅಜಭೂಪನಾತ್ಮಜನಯೋಧ್ಯಿ ಪುರದ॥ ಪೃಥ್ವಿಪತಿ ದಶರಥಗೆ ರಾಮಾಭಿಧಾನದಿಂ । ಮತ್ತೆ ಶೇಷನು ಲಕ್ಷ್ಮಣಾಂಕ ಸಹಿತಾಗಿ ನಾವ್ । ಪುತ್ರರೆಂದೆನಿಸಿ ಬಂದಾಗ ಮೋಕ್ಷವನೀವೆನಿದು ದಿಟವು ಆದೊಡಿನ್ನು ॥ ೧ ॥

ರಾಗ – ಸೌರಾಷ್ಟ – ತ್ರಿವುಡೆತಾಳ

ಪಾಕ ಶಾಸನನೊಡನೆ ಸಮರವು । ಸಾಕು ಸಾಕೈ ನಿನ್ನ ಮಾತೆಯ ।
ವಾಕು ಸಂದುದು ಇನ್ನು ಬಿಡು ಬರಿ । ದೇಕೆ ವೈರ ॥ ೧ ॥

ಹಿಂದೆ ಬವರದಿ ಮೇಘನಾದ ಪು । ರಂದರನ ಗೆಲಿದವನಿಯಲಿ ಮಾ ।
ಹೇಂದ್ರಜಿತು ವೆಂದೆನುತ ಪೆಸರನು ಹೊಂದಿ ಮೆರೆಯೆ ॥ ೨ ॥

ಬಳಿಕ ಮಘವನ ನೀ ಗೆಲಿದೆ ಇ । ನ್ನಳವಿಯುಳಿದೊಂದಾಗಿ ಕೆಳೆತನ ।
ದೊಳಗೆ ನೀವಿರೆ ಲೇಸೆನುತ ಹರಿ । ತಿಳುಹಲದನು ॥ ೩ ॥

ಸಾರವರಿಯುತಲುಭಯರೂ ನಿಜ । ವೈರವನು ಕಳೆದೊಮ್ಮತದಿ ನಲಿ ।
ದಾ ರಮಾಧವಗೆರಗೆ ಕಾಣುತ । ಭೂರಿ ದಯದಿ ॥ ೪ ॥

ವಿನಯದಿಂ ಶಶಿಕೇತ ಶಕ್ರರ । ಮನ ಮುನಿಸ ನೆರೆ ಪರಿಹರಿಸಿ ಮೇಣ್ ।
ಸನುಮತದೊಳ ವರಿಂದ ಮಿಗೆ ಮ । ನ್ನಣೆಯ ಪಡೆದು ॥ ೫ ॥

ಬಲಮೆರಡುಮೊಂದಾಗಿ ಜೈ ಯೆಂ । ದುಲಿಯೆ ಗರುಡನ ಹೆಗಲನೇರುತ ।
ತಳುವದೈದಿದನಮೃತ ಶರಧಿಗೆ । ಜಲಜ ನಯನ ॥ ೬ ॥

ವಾರ್ಧಿಕ

ರಾವಣಾತ್ಮಜನು ಮಾತುಳನೊಡನೆ ಬಲ ಸಹಿತ । ತೀವಿದುತ್ಸಾಹದಿಂ ಸಗ್ಗಮಂ ಬಿಟ್ಟುನಿಜ। ಠಾವ ಸೇರುತ ಮಾತೆ ಪಿತರ್ಗೆಲ್ಲ ಹದನಮಂ ಪೇಳಿ ಪದುಳದೊಳಿರ್ದನು ॥ ಈ ವಿನೂತನ ಕವಿತೆಯೊರೆದ ದುರ್ಗಾಂಬೆಯಡಿ । ದಾವರೆಗೆ ಮಣಿದು ಕಾಶ್ಯಪ ಕುಲಜನೇತಡ್ಕ। ಭೂವಿಬುಧ ಕೃಷ್ಣಾಖ್ಯನಾತ್ಮಜಂ ವೈ ವೆಂಕಟೇಶ್ವರಂ ಬರೆದು ಇದನು ॥ ೧ ॥

ಮದನ ಹರನರಸಿ ಪರಶಿವೆಯ ವದನಾಬ್ಜದಿಂ । ದುದಿಸಿರ್ದ ಕವಿ ಸುಧೆಯ ಲೇಖನಿಯ ಸಟ್ಟುಗದೊ । ಳದ ಹಾಳೆ ಬಾಳೆಲೆಯೊಳಕ್ಕರದಿ ನಾಂ ಬಡಿಸಲಿದನೋದಿ ರಸವ ಸವಿವ ॥ ಸದಯರ್ಗೆ ಶ್ರೀವರನ ಪದದಮಲ ಭಕ್ತಿ ಸಂ । ಪದವ ನೀನೊಲಿದಿತ್ತು ಪೊರೆಯೆನುತ ಲಂಬಿಕೆಯ । ಪದಸರೋರುಹಕೆ ಸಜ್ಜನರ ಸೇವಕನು ನಾಂ ತಲೆಬಾಗಿ ವಿರಮಿಸುವೆನು ॥ ೨ ॥

ಕಂದ

ಸಾವಿರದಾ ಒಂಭೈನ್ನೂ । ರಾರ್ವತ್ತೈದನೆ ಇಸವಿಯೊಳಂಬಿಕೆಯೊಲವಿಂ ॥

ದೀವೆ ನಂ ಜನತೆಗೆ ನಾಂ ಸ । ದ್ಭಾವನೆಯಿಂದೀ ಹೊಸಗಾನ ಸುಧಾರಸಮಂ ॥ ೧ ॥

ರಾಗ – ಯಮನ್ ಕಲ್ಯಾಣಿ – ತ್ರಿವುಡೆ ತಾಳ

ಮಂಗಲಂ ಜಯ ಮಂಗಲಂ ಸ । ನ್ಮಂಗಲಂ ಶ್ರೀ ರಂಗಗೆ ॥ ಮಂಗಲಾಂಗ ಸುರತ್ನ ಭೂಷಿತ । ತುಂಗಬಲ ಖಳಕಾಲಗೆ ॥ ೧ ॥

ಭಕ್ತ ಜನರನು ಬಿಡದೆ ಸಲಹುವ । ಚಿತ್ತಜನ ಪಿತ ಶ್ರೀಶಗೆ । ಮಿತ್ರ ಶಶಿ ಶತಕೋಟಿ ಭಾಸುರ। ಸತ್ಯಮೂರುತಿ ದೇವಗೆ ॥ ೨ ॥

ದೈತ್ಯ ಶುಂಭ ನಿಶುಂಭ ಮಹಿಷರ । ಕತ್ತ ಕಡಿದಿಹ ದೇವಿಗೆ ॥ ಚಿತ್ತ ಶುದ್ಧದಿ ಭಜಿಪ ಭಕುತರ। ನೆತ್ತಿ ಪೊರೆವ ದುರ್ಗಾಂಬೆಗೆ ॥ ೩ ॥

॥ ಮಂಗಳ ಮಹಾಶ್ರೀ ॥

******

ಅತಿಕಾಯ ವಿಜಯ - ಪಾತ್ರವರ್ಗ

1. ದೇವೇಂದ್ರ
2. ಅಪ್ಸರೆಯರು
3. ಜಯಂತ
4. ಅಗ್ನಿ
5. ಯಮ
6. ನಿಋುತಿ
7 ವರುಣ
8. ವಾಯು
9. ಕುಬೇರ
10. ಈಶ್ವರ
11. ಗಿರಿಜೆ
12. ಶ್ರೀ ಮಹಾವಿಷ್ಣು
13. ಲಕ್ಷ್ಮಿ
14. ನಾರದ
15 ಚಂದ್ರಕೇತ
16. ಪಟ್ಟಣಿಗ
17. ರಾವಣ
18. ಧಾನ್ಯಮಾಲಿನಿ
19. ಅತಿಕಾಯ
20. ಬ್ರಾಹ್ಮಣರು
21. ಚಾರಕರು
22. ಸುದರ್ಶನ
23. ಪಾಶುಪತ

ವೈ. ವೆಂಕಟೇಶ್ವರ ಭಟ್ಟ, ಯೇತಡ್ಕ

ಕೃತಿ ಕರ್ತರಾದ ದಿ॥ ವೈ. ವೆಂಕಟೇಶ್ವರ ಭಟ್ಟರು, ಕಾಸರಗೋಡು ತಾಲೂಕಿನ ಕುಂಬ್ಡಾಜೆ ಗ್ರಾಮದ ಒಂದು ಪುಟ್ಟ ಹಳ್ಳಿಯಾದ ಏತಡ್ಕದಲ್ಲಿ ೧೯೧೮ನೇ ಇಸವಿ ನವೆಂಬರ್‌ನಲ್ಲಿ ಕೃಷಿಕರಾದ ದಿ॥ ವೈ.ಕೃಷ್ಣ ಭಟ್ಟ ಮತ್ತು ದಿ॥ ಗೌರಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಮೂಲತಃ ಕುಂಬ್ಳೆ ಸಮೀಪದ ಕೋಣಮ್ಮೆಯವರೆಂದು ಹೇಳಲಾದ ಇವರು, ಅಲ್ಲಿಂದ ವುಳಿಕ್ಕುಂಜ ಎಂಬಲ್ಲಿ ಅನೇಕ ವರ್ಷಗಳಿದ್ದು, ಬಳಿಕ ಯೇತಡ್ಕಕ್ಕೆ ಲೇಖಕರ ಮುತ್ತಜ್ಜನ ಕಾಲದಲ್ಲಿ ಬಂದು ನೆಲೆಸಿದರೆಂದು ಹೇಳಲಾಗುತ್ತಿದೆ. ಮುಂದೆ ಏತಡ್ಕದಂತಹ ಹಳ್ಳಿಯಲ್ಲಿ ಆಗಷ್ಟೇ ಸ್ಥಾಪಿತವಾಗಿದ್ದ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಯಿತು.

ಸ್ಥಾಪನೆ 1943

ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ) ಬೆಂಗಳೂರು

ಪ್ರಕಟಣೆ